Sri A. R. PANCHAGAVI.—I beg to move:

"That the House agrees with the 18th Report of the Business Advisory Committee."

Mr. SPEAER.—The Question is:

"That the House agrees with the 18th Report of the Bnsiness Advisory Committee."

The motion was adopted.

BILLS INTRODUCED.

Sri M. V. KRISHNAPPA (Minister for Revenue).—Sir, I beg to introduce the Mysore Prevention of Cow Slaughter and Cattle Preservation Bill, 1963.

Mr. SPEAKER.—The Mysore Prevention of Cow Slaughter and Cattle Preservation Bill, 1963 is introduced.

Sri R. M. PATIL(Minister for Home).—Sir, I beg to introduce the Mysore Motor Vehicles (Taxation on Passengers and Goods) (Amendment) Bill, 1963.

Mr. SPEAKER.—The Mysore Motor Vehicles (Taxation on Passengers and Goods (Amendment) Bill, 1963 is introduced.

Sri K. MALLAPPA (Minister for Industries).—Sir, I beg to introduce the Mysore State Aid to Industries (Amendment) Bill, 1963.

Mr. SPEAKER.—The Mysore State Aid to Industries (Amendment) Bill, 1963 is introduced.

Sri K. PUTTASWAMY (Minister for Municipal Administration).—Sir, I beg to introduce the Mysore Town and Country Planning (Amendment) Bill, 1963.

Mr. SPEAKER.—The Mysore Town and Country Planning (Amendment) Bill, 1963 is introduced.

Sri K. PUTTASWAMY (Minister for Municipal Administration).—Sir, I beg to introduce the Mysore Cattle Licensing Bill, 1963.

Mr. SPEAKER.—The Mysore Cattle Licensing Bill, 1963 is introduced.

MYSORE MUNICIPALITIES BILL, 1962 AS REPORTED BY JOINT SELECT COMMITTEE.

(Motion to Consider.)

Sri K. PUTTASWAMY (Minister for Municipal administration).—Sir. I beg to move:

"That the Mysore Municipalities Bill, 1962, as reported by the Joint Select Committee be taken into consideration."

Mr. SPEAKER.—Motion moved:

"That the Mysore Municipalities Bill, 1962 as reported by the Joint Select Committee be taken into consideration."

Sri K. PUTTASWAMY.—Sir, in making a motion for the consideration of the Report of the Joint Select Committee on the Mysore Municipalities Bill, 1962 I have to acknowledge my gratitude for the co-operation that the Joint Select Committee extended to me during the deliberations. Sir, the task that was entrusted to them was sufficiently onerous and they have very expeditiously considered the Bill and enabled me to present a report to this House.

Sir, the report is unanimous and the committee consisted of members who had very wide experience of the urban administration. They were aware of all the problems and while they considered the Bill, they have made several useful suggestions. Some of the important changes, I would like to bring to the notice of the House.

Sir, in the original Bill, the terms "Octroi" and "Tax" had not been defined and the committee has definied these terms. In the original Bill there was a provision for periodical municipalities and the committee has thought it desirable to omit it. The committee also made certain changes regarding the strength of the Municipal Council based on the population of each town. The committee has again recommended reservation of seats for women. It is to be one for a town municipality and two seats in a city municipality. Sir, Municipalities would be transferring property to seveal persons under the Transfer of Property Act under certain conditions. The Joint Select Committee said that it was necessary to clearly provide for the transfer of property made by the municipal council subject to conditions and it should be effective notwithstanding anything contained in the Transfer of Property Act. Another important change that the committee has made is that the Government itself should frame the rules. Sir, it is common knowledge that the local bodies do not have sufficiently trained persons to draft rules and bye-laws. Therefore, the committee thought it desirable that the Government should take up the responibility of framing the rules. As regards bye-laws, the committee made a recommendation that the Government should frame model bye-laws and send them to municipal councils for adoption with such modifications as are necessary.

Sir, the committee made another recommendation that the tax on sites should not be less than fifty naye paise for every 100 square metres. As regards taxes on buildings, they have fixed that the rateable value should be 12½ per cent in town municipalities and 17½ per cent in city municipalities. Maximum is 28 per cent for town municipality and 30 per cent for city municipality. Sir, it is common knowledge that in several municipalities they are very reluctant to raise the taxes. Consequently they have been finding it very difficult to provide the civic needs. Therefore, the committee thought it desirable to make a recommendation to this House that every town municipal council should levy a minimum

(SRI K. PUTTASWAMY)

of 12½ per cent on the rateable value of the building and city municipality 17½ per cent. They have also taken care to give reduction at 6⅔ per cent on rateable value for maintenance of buildings.

Sir, another important recommendation of the committee is with regard to pilgrim tax. In North Karnatak and even in certain other municipalities the pilgrim tax is levied. In the erstwhile Mysore area there is no such levy. The committee has made a provision in this matter that during Jatras and Urs, with the previous permission of Government, a certain tax may be levied and that tax should be earmarked for the purpose of creating facilities for the visiting pilgrims. Sir, we see that there is irregular development going on in certain municipal areas. They do not have sufficient powers to enforce regular development. Therefore, the committee has made a recommendation that provisions similar to section 25, 25A and 25B of the City Improvement Trust Board Act, Bangalore, should be there for the purpose of laying new extensions and new streets.

1-30 P. M.

In the matter of constituting the improvement boards, the committee has made a recommendation that the Municipal Council must be consulted before the Government appoints any board and that the board should ascertain the views of the municipal council in respect of schemes drawn up by them before the schemes are submitted to Government for approval. In the original Bill, there was a provision for controlling lodging houses for pilgrims. The committee has made a recommendation that it should be omitted. In certain municipalities, the employees have been complaining of irregular payment of their salaries, because the municipality would not be having sufficient bank balance. In order to avoid that, the committee has made a recommendation that every municipal council must provide at least an amount equal to three months' salaries of the employees as closing balance. Another recommendation that the committee has made is for adding provisions relating to the constitution of town area committees. This provision relating to town area committee is now found in the Village Panchayat and Taluk Board Act. But these are being administered as urban areas. In order to enable the municipal administration to have effective control over these bodies, the provisions contained in the Village Panchayat and Taluk Bords Act have been included in the Municipal Bill. One important recommendation that the Joint Select Committee has made is for the creation of a municipal administration service. This municipal administration service will also include the employees of the municipal corporations, municipal councils notified area committees and trust boards. The Joint Select Committe has made one other recommendation regarding bus stops for passengers, ticket booths and bus stands in various municipalities. The MSRTC has been finding it difficult to

obtain places. Therefore, the Joint Select Committee, having taken note of this difficulty, has made a recommendation that the MSRTC should get suitable places and on reasonable rent to be fixed by Government. Several schedules have been carefully scrutinised by the committee. With regard to the schedules, especially regarding octroi and other taxes, what is provided here is the maximum. But it is left to each local body to fix up the rate within the maximum allowed under the schedule. Therefore, sufficient latitude is given to the local bodies to fix up the level of taxation. The only restriction that is placed on the freedom of the municipal council is that the minimum taxation should be 12½ per cent in the case of town municipalities and 17½ per cent in the case of city municipalities.

Before concluding, I would like once again, to acknowledge the co-operation and help that Joint Select Committee extended to me to enable me to present this report early for the consideration of this House.

MR. SPEAKER.—Before I call anybody, I would like to make the position clear. Amendments are being sent and I have been given to understand that a large number of amendments are being received. I suggest that amendments should be given by 3 P.M. to-day, although, they should have been given earlier. Yesterday, they could have given. They have to be serialised, scrutinzed and distributed to all the members, and therefore, amendments will be received up to 3 P.M.

Sri C. J. MUCKANNAPPA (Sira).—One more hour may be given.

MR. SPEAKER.—If there are one or two more amendments, I do not mind. In the past, I have allowed amendments to be given even on the next day. But, if there is a large number, how is it possible to reconcile ? Try to send the amendments by 3 P.M. If there is one or two left over, I will see how to deal with the same. Secondly the time allotted for this Bill will have to be adhered to very rigidly. I believe, yesterday, it was impliedly understood that we would sit for one hour more every day to make up the time lost yesterday.

Sri SANJEEVANATH AIKALA (Suratkal).—As it is, we are sitting one hour more.

MR. SPEAKER.—We are sitting for a duration and not for a longer time. Everywhere, the duration of a meeting is six hours and here we are sitting for 5½ hours. Now Sri Sunthankar may begin the debate. I do not propose to give any chance to the members of the Committee. They may speak on the amendments if they got a chance at all. I believe Sri Sunthankar has given notice of a large number of amendments. Let him try to be brief.

†Sri B. R. SUNTHANKAR (Belgaum City).—I will not cover the same grounds here. [Interruptions]

At the outset, I have to observe with great regret that this Bill in the present form, as it has emerged from the Joint Select Committee, is greatly disappointing. The Joint Select Committee has, no dubt, made some changes, a large number of minor changes. But those changes do not materially alter the re-actionary and retrograde character of the original Bill. The complexion and the character of the

Bill, which I may describe as undemocratic, remain the same. After studying the Bill closely, I have to say that this Bill, if passed into law, will bode ill for the future of the Local Self-Government in the State. It was expected, Sir, that this Bill, after emerging from the Joint Select Committee would improve upon the existing legislations in the various parts of the State. It was expected that, living as we are in the year 1963 passing sixteen years of independence, our local-self-government institutions and particularly municipalities would be given more powers, and wider powers, and that these wide powers are in the hands of the peoples' representatives. But, Sir, the report of the Joint Select Committee has failed to come up to the expectations. In our country, there has been a sort of evolution of the local-self-government movement during the last century and we have reached a certain stage in the progress of Local-Self government.

The Local Self-Government Institutions, particularly the municipalities were almost autonomous bodies. Particularly that has been our experience in the Bombay Karnataka area. The interference by the Government was very little in those parts and whenever such interference was necessary because of the grave misdeeds or abuse of power by those local bodies, then, of course, there was intereference by the Government. But in all other respects, the municipalities, in the former Bombay State were and even now are autonomous and function without any sort of interference. There was only Government supervision by way of inspection by Government officials. They were self-controlled institutions. But now, Sir, after this Bill becomes law, the municipalities will not be self-controlled but Government controlled institutions. Sir, our municipalities—I am speaking of the Bombay Karnataka area, had adequate powers in the civic affairs of the urban areas. But this Bill is snatching away some of the very important privileges, rights and powers of the municipalities. Sir, this Bill is going backwards. On an earlier occasion, Sir, I had said that Bills of this sort were setting back the clock of history.

MR. SPEAKER.—The House is discussing the Bill as reported by the Joint Select Committee. The principles embodied in the original Bill have been accepted by the House.

SRI B. R. SUNTHANKAR.—I am speaking about the Bill as reported by the Joint Select Committee.

SRI SANJEEVANATH AIKALA.—He wants to say that it has gone from bad to worse.

MR. SPEAKER.—He may criticise portions which have been turned worse. Bad portions have been accepted by this House.

SRI B. R. SUNTHANKAR.—The worse feature of this Bill is that this is introducing Government control in the affairs of the Municipalities, and the Government control is to such an extent that it will negotiate the very purpose of the local self-governing institutions, particularly municipalities. As compared with the Bombay Act, this

Bill goes half-a-century back. There has been encroachment in various spheres, in various matters and in various fields in the affairs of the Municipalities. There has been a reduction in the number of representatives of the people. This Bill, even though there has been some slight improvement in the matter of representation because the Joint Select Committee has increased the number of representations in the municipality, still reduces the number of elected representatives. I may give a concrete instance, Sir. At present the Belgaum Municipality has 44 councillors. After this Bill becomes law, the number would be reduced to 40. The same is the case about Nipani. At present, Nipani has 24 councillors. That number will be reduced to 19 after this Bill becomes law. Similarly Sir, this Bill re-introduced the principles of nominations, a principle which was abandoned by the first Congress Governments when they came into power in the Bombay Presidency. That was a step forward taken by the former Bombay Governments 25 years ago. They had abolished all nominations in the local bodies which was formerly maintained by the British Government. This Bill has gone back by 25 years and is again re-introducing the principle of nominations which was a very handy excuse for the British Government to nominate their own henchmen. This Government is following in the foot-steps of the British Government. Sir, again this Government arrogated to itself the power of appointing councillors and even of appointing presidents and vice-presidents.

Mr. SPEAKER.—Has the member given any amendments to these clauses ?

Sri B. R. SUNTHANKAR.—Yes, Sir.

Mr. SPEAKER.—Then he can speak on the amendments when they are taken up.

Sri B. R. SUNTHANKAR.—Yes, Sir. This Bill introduces, as I said, Government control to a large extent. So, this interference by the Government destroys all the autonomy of the municipalities.

Sir, section 30 of the Bombay Municipal Boroughs Act, 1925 reads :- "except as in this Act and otherwise expressly provided, the Government of the municipal boroughs vests in the municipality." I am quoting the Bombay Act. So, it is very clearly stated in the Bombay Act. The power to rule the Municipality vests in the Municipality. Sir, in this Bill, there is nowhere such a statement made. The power which was vested in the municipalities is being taken away by this Government through this Bill. Instead of the power vesting in the municipality, now to a large extent, according to this Bill, the power vests in the Government. Sir, the worst feature of this Bill is interference by the Government in the budget matters of these civic bodies. I am referring to clauses 287 and 288-under which Goveroment can modify any part of the Budget. Similarly Sir, Government can modify the budget or any part thereof so as to secure the compliance with any of the provisions of this Act and the rules made thereunder.

Similarly clause 288 also puts restriction on the power of autonomy of the municipalities in the matter of the Budget. This is an intere-

(SRI B. R. SUNTHANKAR)

ference. Then, Sir, according to clause 72, prior approval of the Government is required. Even contracts which are above Rs. 5,000 in the case of Town Municipalities and contracts which are above Rs. 20,000 in the case of City Municipalities, require prior approval. This means that in such small matters .....

MR. SPEAKER.—Which is the clause he is having in his mind ?

SRI B. R. SUNTHANKAR.—Clause 72 Sir. My contention is that the Joint Select Committee has failed to make any change which will be conducive to the growth of the municipality.

MR. SPEAKER.—That principle unamended was accepted by the House when it referred the Bill to the Select Committee. They were at liberty to make any amendments. But they have made no amendment. The Hon'ble Member should know that the first reading of this Bill is over.

SRI B. R. SUNTHANKAR.—They have not improved upon the clause.

MR. SPEAKER.—If there is any change, the whole thing is debated upon. He can simply say 'I want to move an amendment.'

SRI B. R. SUNTHANKAR.—I wish to point out the omission on the part of the Joint Select Committee in not having considered this aspect.

MR. SPEAKER.—I can understand at least when the particular clause is put to vote. He can say 'I want to plead for its rejection'. Now it is not like that. When the clauses are put to vote, one after, another, he may criticise, consistent with other things and vote against the same, if he so likes.

SRI B. R. SUNTHANKAR.—The rule making power is completely vested in the municipalities according to the Bombay Act. But here that power has been taken over by the Government. There was an opportunity for the Joint Select Committee to safeguard the interests of the municipalities; but that opportunity was lost, I regret to say, by the Joint Select Committee. This takes me to the basic question as to what should be the policy of this House or of the Government in respect of these municipalities and local self government institutions, whether to make them really self-government institutions, how to make them in the largest possible measure really and genuinely self-governing institutions. These are democratic institutions. They are a sort of training ground for our democracy. Popularly they are called as the schools of democracy. These institutions should be allowed to grow as self governing institutions. We are in age of decentralised democracy. There is a tendency everywhere or at least there is a tall talk about decentralising democracy. Some of the States are taking steps in the right direction in this respect. Only very recently, we heard that the Gujarat Government was taking positive steps to effect decentralisation in respect of salf-governing bodies. This Government could have easily done that. But unfortunately, this Government has failed to proceed

in the right direction. The process should be to hand over more and more power to the people's representatives. That should be the basic consideration. As has been said by the 1918 Declaration of the British Government, let them learn by committing mistakes; let them commit mistakes; let them improve. They will be able to improve even though they commit mistakes. That should be the attitude. People should be given full freedom to manage their own civic affairs. From this view point this Bill has been an utter failure.

Now I have to say a few words about the Improvement Board. It will be a super-imposed body on the municipalities. Looking to the expenses that will be incurred on this Board, it is likely to be a white elephant to our municipalities; looking to the resources of the municipalities, it is bound to be a sort of white elephant. And this Improvement Board, if instituted, will over-ride the municipalities. As a matter of fact, Government itself should take the responsibility of such Improvement Boards. The town and urban areas are neglected. They are paid the least attention. All attention is concentrated on the rural areas. Perhaps that is very convenient to the ruling party for catching the votes of the rural masses. That has been a very handy device but in doing so, Government has been neglecting the urban areas–the towns and cities There should be no objection for Government to do something for these urban areas and from that view-point, Government should take the responsibility of these Improvement Boards. These Boards should not be a sort of super imposed bodies on the municipality. In the obligatory and discretionary functions a number of items have been mentioned. There has been a long list of these functions of the municipalities. But what about the resources and fund of our municipality ?

How can the municipality perform all these functions ? The resources of the municipalities are very very limited. The scope of taxation is also very limited. So, Government, as a matter of fact, should come forward to extend financial assistance to the municipalities. They should give liberal grants. Sir, this Government is averse to give grants to the municipalities. That should not be the policy; that would hamper the growth of our municipalities and civic life.

Then, Sir, about the language question. The municipalities in the Marathi areas have been maintaining their official records since their very inception in Marathi. But this Bill seeks to impose Kannada on them–for instance the Belgaum and Nippani Municipalities. Now, the proceedings and minutes of the general meetings as well as the committee meetings shall have to be maintained in Kannada. Even the declaration will have to be made in Kannada according to one of the provisions here.

2-00 P.M.

MR. SPEAKER.—The Hon'ble Member is taking all the time and shutting out others from participating in the discussion on the Bill. There are a number of amendments also.

Sri B. R. SUNTHANKAR.—Yes, Sir. With these remarks I submit with regret that I cannot support this Bill.

†**Sri ALLUM KARIBASAPPA** (Kurugod).—Mr. Speaker, Sir, I would like to make a few suggestions for the smooth and efficient administration of the Municipalities both town and city municipalities. At present the system of electing the Presidents and the Vice-Presidents of the municipalities is yearly. With this system we cannot expect any efficient administration because by the time the concerned person understands the affairs of the municipality, it will take two to three months and within the remaining period of 8 to 9 months we cannot expect them to do any good and efficient work. So I submit that the term of office of the President and the Vice-President should be made 3 or 5 years. Then, the present system of election is Divisionwar, that is, three or four divisions will be clubbed. This is not a healthy way of electing members. My suggestion is to have Ward-war elections. Then only efficient and good people will come up and the town and the city concerned would be fully developed. Lastly I suggest that some seats be reserved for ladies. With this, I thank the Speaker for having given me an opportunity to speak.

†**ಶ್ರೀ ಗೋಪಾಲ ಸಾಲೆನ್ನ** (ಮೂಡಬಿದ್ರೆ).—ಸ್ವಾಮಿ, ಈ ಮಸೂದೆಯು ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ತುಂಬ ಆಶಾದಾಯಕವಾಗಿ, ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸಾಕಷ್ಟು ಬದಲಾವಣೆಯಾಗಿ ಬರಬಹುದು ಎಂಬ ನಿರೀಕ್ಷೆ ನಮಗೆ ಇತ್ತು. ಆದರೆ ಈಗ ಈ ಮಸೂದೆಯನ್ನು ನೋಡಿದರೆ ಪ್ರಜಾಪ್ರಭುತ್ವ ನೀತಿಗಳನ್ನು ಕುಂಠಿತಗೊಳಿಸಿ, ನಗರಾಡಳಿತದ ಅಧಿಕಾರವನ್ನು ಕೂಡ ಸರ್ಕಾರವು ತನ್ನ ಕೈಯಲ್ಲಿಟ್ಟುಕೊಂಡು ಜನರು ತಮ್ಮನ್ನು ತಾವು ನಡೆಸಿಕೊಂಡು ಬರುವಂಥ ಒಂದು ಜವಾಬ್ದಾರಿ ಮತ್ತು ಅಧಿಕಾರವನ್ನು ಕುಂಠಿತಗೊಳಿಸುವಂತೆ ಮಾಡಿದೆ. ಇದು ಸರಿಯಲ್ಲ. ಏಕೆಂದರೆ ಜನತೆಯನ್ನು ಪ್ರಜಾಡಳಿತದಲ್ಲಿ ತರಬೇತಿ ಮಾಡುವಂಥ ಉತ್ತಮವಾದ ನಾಯಕತ್ವವನ್ನು ಬೆಳೆಸಲಿಕ್ಕೆ ಅನುಕೂಲವಾದಂಥ ಅವಕಾಶಗಳನ್ನು ಈ ಮಸೂದೆಯು ಒಳಗೊಂಡಿರಬೇಕಾಗಿತ್ತು. ಅದನ್ನು ಕಿತ್ತು ಒಗೆದಂತಾಗಿದೆ. ಬ್ರಿಟಿಷರ ಕಾಲದಲ್ಲಿ ಯಾವ ಪೌರ ಆಡಳಿತ ಕಾಯಿದೆ ಇತ್ತೋ ಅದಕ್ಕಿಂತಲೂ ಹೆಚ್ಚು ಅಧಿಕಾರವನ್ನು ಈ ಮೂಲಕ ಕಿತ್ತೊಗೆದು ಸರ್ಕಾರವೇ ಈ ನಗರ ಸಭೆಗಳ ಮೇಲೆ ತನ್ನ ಕೈವಾಡವನ್ನು ಬೆಳಸಿಕೊಂಡು ಹೋಗುವುದು ಸ್ಪಷ್ಟವಾಗಿದೆ. ಇದು ಸರಿಯಲ್ಲ. ನಾವು ಬಹಳ ಮುಂದೆ ಹೋಗುತ್ತಿರುವಂಥ ಒಂದು ಜನಾಂಗ. ನಾವು ಆಡಳಿತ ವಿಕೇಂದ್ರೀಕರಣವನ್ನು ಘೋಷಿಸುತ್ತಿದ್ದೇವೆ. ಆ ಪ್ರಕಾರ ಸಣ್ಣ ಸಣ್ಣ ನಗರಗಳ ಮಟ್ಟಿಗಾದರೂ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಆ ನಗರಾಡಳಿತವು ಜನಸಾಮಾನ್ಯರ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವಂಥ ಅವಕಾಶವನ್ನು ಕಲ್ಪಿಸಿಕೊಡಲೇಬೇಕಾಗಿದೆ.

ಇನ್ನು ಕೆಲವು ವಿಚಾರಗಳನ್ನು ತೆಗೆದುಕೊಳ್ಳೋಣ. ಚುನಾವಣೆಗಳ ವಿಷಯಗಳನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಅದರಲ್ಲಿ ಟರಿಟೋರಿಯಲ್ ಡಿವಿಷನ್ಸ್ ಮಾಡಿ 3-5 ಜನ ಉಮೇದುವಾರರನ್ನು ಚುನಾಯಿಸಬೇಕು ಎಂದು ಹೇಳುತ್ತಾರೆ. ಇದು ಸರಿಯಲ್ಲ. ಈಗ ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳಿಗೆ ಚುನಾವಣೆಗಳನ್ನು ನಡೆಸುವಾಗಲೂ ದ್ವಿಸದಸ್ಯ ಸ್ಥಾನಗಳನ್ನು ವಿಭಾಗಿಸಿ ಏಕ ಸದಸ್ಯ ಸ್ಥಾನಗಳನ್ನಾಗಿ ಮಾರ್ಪಡಿಸಿ ಜನತೆಗೆ ಅವರ ನಿಜವಾದ ಪ್ರತಿನಿಧಿಯನ್ನು ಆರಿಸಿಕೊಳ್ಳುವಂಥ ಅವಕಾಶವನ್ನು ಇಡೀ ಭಾರತದಲ್ಲಿ ಕಲ್ಪಿಸಿಕೊಡಲು ಘಟನೆಯಲ್ಲಿ ನಾವು ಅಂಗೀಕರಿಸಿದ್ದೇವೆ. ಹಾಗಿರುವಾಗ ಮದರಾಸು ರಾಜ್ಯದಲ್ಲಿದ್ದಂತೆ ವಾರ್ಡ್ ಎಂದು ಮಾಡಿಕೊಂಡು ಪ್ರತಿಯೊಂದು ವಾರ್ಡಿಗೂ ಒಬ್ಬರು ಚುನಾಯಿತ ಸದಸ್ಯರು ಇರುವ ಪದ್ಧತಿಯನ್ನು ಜಾರಿಗೆ ತಂದರೆ ಬಹಳ ಉತ್ತಮವಾಗುತ್ತದೆ. ಒಂದು ಡಿವಿಷನ್ನಿನಲ್ಲಿ ಐದು ಜನರು ಚುನಾಯಿತರಾದರೆ, ಏನಾದರೂ ಚುನಾವಣೆ ತಕರಾರು ಬಿದ್ದಲ್ಲಿ ಯಾರಾದರೂ ಒಬ್ಬರು ಮಾಡಿದ ತಪ್ಪಿಗಾಗಿ ಐದು ಜನರೂ ಕೂಡ ನಷ್ಟಕ್ಕೆ ಬೀಳಬೇಕಾಗುತ್ತದೆ. ಅಷ್ಟು ಮಾತ್ರವಲ್ಲ, ಬೇರೆ ಬೇರೆ ಪ್ರಭಾವಗಳಿಂದಾಗಿ ಯಾರಾದರೂ ಒಬ್ಬ ವ್ಯಕ್ತಿ ತನ್ನ ಒಟ್ಟಿಗೆ ಇತರ ನಾಲ್ಕು ಜನರನ್ನು ಸೇರಿಸಿಕೊಂಡು ತನ್ನ ಒಬ್ಬನ ಪ್ರಭಾವದಿಂದಲೇ ಅವರನ್ನೂ ಚುನಾವಣೆಯಲ್ಲಿ ತರುವಂಥ ಅವಕಾಶ ಕೂಡ ಇಲ್ಲಿ ಬಹಳ ಇದೆ. ಇದಕ್ಕೆ ಅವಕಾಶ ಕೊಡುವುದು ಸರಿಯಲ್ಲ.

ಏಕೆಂದರೆ ಅದರಿಂದಾಗಿ ವೈಯಕ್ತಿಕ ವ್ಯಕ್ತಿತ್ವವೇ ಬೆಳಕಿಗೆ ಬಾರದೇ ಆಡಳಿತ ಒಟ್ಟಬ್ಬರ ಪ್ರತಿಷ್ಠೆಗೆ, ಕೈವಾಡಕ್ಕೆ ಸೇರಿದಂತಾಗಬಹುದು. ಆದ್ದರಿಂದ ಇದನ್ನು ಕೂಡ ಸೆಲೆಕ್ಟ್ ಕಮಿಟಿಯವರು ತಮ್ಮ ಗಮನಕ್ಕೆ ತೆಗೆದುಕೊಳ್ಳದೇ ಇದ್ದದ್ದು ಸರಿಯಲ್ಲ.

ಇನ್ನೂ ಷೆಡ್ಯೂಲ್ ಕ್ಯಾಸ್ಟ್ಸ್‌ಗೆ ಮತ್ತು ಮಹಿಳೆಯರಿಗೆ ಸೀಟುಗಳನ್ನು ರಿಜರ್ವ್ ಮಾಡಿದೆ. ಈಗ ಅಸೆಂಬ್ಲಿ ಮತ್ತು ಪಾರ್ಲಿಮೆಂಟಿಗೆ ಮಹಿಳೆಯರಿಗಾಗಿ ಸೀಟುಗಳನ್ನು ಕಾದಿರಿಸಲಿಲ್ಲ. ಅವರು ಜನರಲ್ ಸೀಟುಗಳಿಂದ ಚುನಾಯಿತರಾಗಿ ಬರುವ ಸಾಮರ್ಥ್ಯವನ್ನು ಪಡೆದಿದ್ದಾರೆ, ಅಷ್ಟು ಮಾತ್ರವಲ್ಲ ಈಗ ನಮ್ಮ ಭಾರತದ ರಾಜಕೀಯದಲ್ಲಿ ಮಹಿಳೆಯರು ಪುರುಷರಿಗಿಂತ ಯಾವ ಮಟ್ಟದಲ್ಲೂ ಕಡಿಮೆ ಇಲ್ಲ, ಹೀಗಿರುವಾಗ ಸಣ್ಣ ಸಣ್ಣ ಪಂಚಾಯಿತಿ ಮುನಿಸಿಪಾಲಟಿ, ತಾಲ್ಲೂಕು ಬೋರ್ಡು ಮತ್ತು ನಗರ ಸಭೆಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಸ್ಥಾನಗಳನ್ನು ಕಾದಿರಿಸಿ ಅವರನ್ನು ಸಮಾಜದಲ್ಲಿ ಹಿಂದುಳಿದವರಿಗಿಂತಲೂ ಕಡಮೆ ಸ್ಥಾನಕ್ಕೆ ತರುವುದು ಸರಿಯಲ್ಲ. ಇದನ್ನು ಸೆಲೆಕ್ಟ್ ಕಮಿಟಿಯವರು ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಈಗ ಸಿಟಿ ಮುನಿಸಿಪಾಲಟಿಯಲ್ಲಿ ಅಥವಾ ಟೌನ್ ಮುನಿಸಿಪಾಲಟಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಒಂದು ಸೀಟು ಮತ್ತು ಮಹಿಳೆಯವರಿಗೆ 2 ಸೀಟುಗಳನ್ನು ರಿಜರ್ವ್ ಮಾಡಬೇಕೆಂದು ಇದೆ. ಇದನ್ನು ನೋಡಿದರೆ ಅವರು ಅಸ್ಪೃಶ್ಯರಿಗಿಂತಲೂ ಹಿಂದೆ ಇದ್ದಾರೆ ಎಂದು ಕಾಣುವಂತಾಗಿದೆ.

Mr. SPEAKER.—All ladies put together are larger in number than scheduled castes people.

Sri GOPALA SALENNA.—It is not a question of number, Sir. We cannot push them to a back seat. We want to make them forward. ಹಾಗಿರುವಾಗ ಅವರನ್ನು ಮುಂದಕ್ಕೆ ತರಬೇಕೇ ಹೊರತು ಹಿಂದಕ್ಕೆ ತರುವುದು ಸರಿಯಲ್ಲ, ಇದು ಹಿಂದುಳಿದಿರುವ ಮನೋವೃತ್ತಿಯನ್ನು ತೋರಿಸಿದಂತಾಗುತ್ತದೆ, ಇದನ್ನು ಮುಂದುವರಿದ ಯಾವ ಮಹಿಳೆಯರೂ ಸ್ವಾಗತಿಸಲಾರರು, ಆ ದೃಷ್ಟಿಯಿಂದ ಈ ರಿಜರ್ವೇಷನ್‌ನ್ನು ಕಿತ್ತು ಒಗೆಯಬೇಕೆಂದು ಹೇಳುತ್ತೇನೆ. ಸಾಮಾಜಿಕವಾಗಿ ಕೆಲವು ಕುಂದುಕೊರತೆಗಳು ಇರುವುದರಿಂದ ಕೆಲವು ವರ್ಷಗಳ ತನಕ ಘಟನೆಯಲ್ಲೇ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸಂಬಂಧಪಟ್ಟಂತೆ ರಿಸರ್ವೇಷನ್‌ಗೆ ಅವಕಾಶ ಮಾಡಿ ಕೊಡಲಾಗಿದೆ. ಅವರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಎರಡು ವಿಭಾಗ ಇದೆ—ಯಾರು ಒಂದು ಕಾಲದಲ್ಲಿ ಅಸ್ಪೃಶ್ಯರಾಗಿದ್ದರೋ ಆ ಸಮಾಜಕ್ಕೆ ಸೇರಿದವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು, ಷೆಡ್ಯೂಲ್ ಟ್ರೈಬ್ಸ್ ಎನ್ನುವವರು ಗುಡ್ಡಗಾಡಿನಲ್ಲಿ ವಾಸ ಮಾಡುತ್ತಿರುವವರು; ಈ ರೀತಿ ಪ್ರತ್ಯೇಕ ಮಾಡಲ್ಪಟ್ಟಿದೆ. ಘಟನೆಯಲ್ಲಿ ಈ ರೀತಿ ಎರಡು ಪ್ರತ್ಯೇಕವಾದ ಕಲಂಗಳು ಇವೆ. ನಮ್ಮ ಮಸೂದೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಎರಡನ್ನೂ ಒಟ್ಟುಗೂಡಿಸಿ ಒಂದೇ ಸೀಟನ್ನು ಕಾದಿರಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಂತಹ ಸ್ಥಳಗಳಲ್ಲಿ ಇದು ಬಹಳ ದುಷ್ಪರಿಣಾಮವನ್ನುಂಟು ಮಾಡಿದೆ. ಕಳೆದ ಸಲ ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿ ಬೋರ್ಡು ಚುನಾವಣೆಯಲ್ಲಿ ತಾಲ್ಲೂಕು ಬೋರ್ಡುಗಳಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟವರೇ ಹೆಚ್ಚು ಮುಂದೆ ಬರಬೇಕಾಯಿತು. ಸಾಧಾರಣ 70 ಸಾವಿರಕ್ಕಿಂತ ಜಾಸ್ತಿ ಜನಸಂಖ್ಯೆ ಇರತಕ್ಕ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಪ್ರತಿನಿಧಿಗಳು ಆ ಸಂಸ್ಥೆಗಳಿಗೆ ಹೋಗಲಿಕ್ಕೆ ಅವಕಾಶ ಕಡಮೆಯಾಯಿತು, ಏಕೆಂದರೆ ಜನಸಂಖ್ಯೆಯು ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರು ಜಾಸ್ತಿ ಇದ್ದರೂ ಅಲ್ಲಿ ಒಬ್ಬ ಷೆಡ್ಯೂಲ್ಡ್ ಟ್ರೈಬ್ಸ್‌ನವರು ಇದ್ದರೆ ಅವರು ಮುಂದೆ ಬಂದರೆ ಅವರೇ ಗೆದ್ದು ಬರಲಿಕ್ಕೆ ಅವಕಾಶ ಜಾಸ್ತಿ ಇದೆ. ಕಳೆದ ಸಲ ತಾಲ್ಲೂಕು ಬೋರ್ಡು ಚುನಾವಣೆಯ ಸಂದರ್ಭದಲ್ಲಿ ಇದನ್ನು ಪ್ರತಿಭಟನಾ ರೂಪವಾಗಿ ಪ್ರತಿಸ್ಪರ್ಧಿಸಿ ಸಂಬಂಧಪಟ್ಟವರ ಗಮನಕ್ಕೆ ತರಬೇಕಾಗಿ ಬಂತು. ಆದ್ದರಿಂದ ಷೆಡ್ಯೂಲ್ಡ್ ಟ್ರೈಬ್ಸ್‌ನವರು ಎಲ್ಲಿ ಜಾಸ್ತಿ ಇದ್ದಾರೆ ಅಂಥ ತಾಲ್ಲೂಕ್ ಬೋರ್ಡು ಮತ್ತು ನಗರ ಸಭೆಗಳ ಮಟ್ಟಿಗೆ ಅವರಿಗೆ ಪ್ರತ್ಯೇಕವಾಗಿ ಒಂದು ಸ್ಥಾನವನ್ನು ಕಾದಿರಿಸಿ ಅದೇ ರೀತಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಒಂದು ಸ್ಥಾನವನ್ನು ಕಾದಿರಿಸಿ ಅವರುಗಳಿಗಿರತಕ್ಕ ಒಂದು ಸ್ಥಾನದ ಹಕ್ಕನ್ನು ರಕ್ಷಿಸಿಕೊಳ್ಳುವ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೊದಲಿನ ಮದ್ರಾಸ್ ಕಾಯಿದೆಯಲ್ಲಿ ಸಾಧಾರಣಮಟ್ಟಿಗೆ ಸಣ್ಣ ಸಣ್ಣ ಮನೆಗಳಿಗೆ ಕಂದಾಯದ ರಿಯಾಯಿತಿ ಇತ್ತು. 1920ನೆಯ ಇಸವಿಯಲ್ಲಿ ಕಾಯಿದೆ ಮಾಡುವಾಗ ಬ್ರಿಟಿಷರು 18 ರೂಪಾಯಿ ವಾರ್ಷಿಕ ವರಮಾನ ಬರುವಂತಹ ಸಣ್ಣ ಸಣ್ಣ ಗುಡಿಸಲುಗಳನ್ನು ವಿನಾಯಿತಿಗೊಳಿಸಬೇಕೆಂದು ಆ ಕಾಯಿದೆಯಲ್ಲಿ ಗೊತ್ತುಪಡಿಸಿದ್ದರು. ಹಾಗೆಯೇ ನಮ್ಮ ಈ ಕಾಯಿದೆಯಲ್ಲೂ ಅಂತಹ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳುವಂತಹ ಕೂಲಿ ಕೆಲಸ ಮಾಡುವಂತಹವರ ಮನೆಗಳಿಗೆ ರಿಯಾಯಿತಿ ಕಲ್ಪಿಸಿಕೊಡುವುದು ಅಗತ್ಯವಾಗಿದೆ. ಏಕೆಂದರೆ ಈಗ ಸರ್ಕಾರದಿಂದ ಸಾಲ ತೆಗೆದುಕೊಂಡು ಸಣ್ಣ ಮನೆಯನ್ನು ಕಟ್ಟಿಸುತ್ತಾರೆ. ಮೂರು ಸಾವಿರ ರೂಪಾಯಿಗಳವರೆಗೂ

(SRI GOPALA SALENNA)

ಸಾಲ ಮಾಡಿರುತ್ತಾರೆ. ಮಂಗಳೂರಿನ ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿ ಅಂತಹ ಮನೆಗಳಿಗೆ ಸಾಧಾರಣ 20-25 ರೂಪಾಯಿಗಳವರೆಗೂ ಬಾಡಿಗೆ ಬರುತ್ತದೆ—ಅದಕ್ಕೆ ಮಂಗಳೂರಿನ ಮಟ್ಟದಲ್ಲಿ 75 ರೂಪಾಯಿಗಳವರೆಗೂ ಕಂದಾಯ ಕೊಡಬೇಕಾಗುತ್ತದೆ. ಹಾಗೆ ಕೊಡಬೇಕೆಂದರೆ ಅವರ ಇವತ್ತಿನ ಸಂಪಾದನೆಯಲ್ಲಿ ಬಹಳ ಕಷ್ಟವಾಗಿ ಪರಿಣಮಿಸುತ್ತದೆ. ಆದ್ದರಿಂದ ಸಾಧಾರಣ 20 ರೂಪಾಯಿ ವರಮಾನ ಬರುವವರೆಗೂ ಒಂದು ರಿಯಾಯಿತಿಯನ್ನು ಈ ಮಸೂದೆಯಲ್ಲಿ ಕೊಡುವುದು ಅತ್ಯಗತ್ಯ ಎಂದು ಹೇಳುತ್ತೇನೆ.

ಪ್ರೊಫೆಷನಲ್ ಟ್ಯಾಕ್ಸ್ ಈಗಿರುವ ಕಾಯಿದೆಯ ಪ್ರಕಾರ 50 ರೂಪಾಯಿಗಳಿಗಿಂತ ಕಡಮೆ ವರಮಾನ ಬರುವವರಿಗೆ ಮಾಫಿ ಇದೆ, ಅದನ್ನೇ ಇದರಲ್ಲೂ ಸೇರಿಸಿ ಸಣ್ಣ ಉತ್ಪನ್ನ ಬರುವಂತಹ ಸಣ್ಣ ಸಣ್ಣ ನೌಕರರಿಗೆ ರಿಯಾಯಿತಿ ಕಲ್ಪಿಸಿಕೊಡುವುದು ಅಗತ್ಯವಾಗಿದೆ. ಆ ಕಡೆಗೆ ಸೆಲೆಕ್ಟ್ ಕಮಿಟಿಯವರು ಗಮನ ಕೊಡಲಿಲ್ಲ ಮತ್ತು ಈ ಮಸೂದೆ ಯಾವ ರೀತಿ ಸುಧಾರಿತ ರೀತಿಯಲ್ಲಿ ಬರಬೇಕಾಗಿತ್ತೋ ಆ ರೀತಿ ಸುಧಾರಿತ ರೀತಿಯಲ್ಲಿ ಬರಲಿಲ್ಲ. ಆದ್ದರಿಂದ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

† ಶ್ರೀ ಟಿ. ಮಾದಯ್ಯಗೌಡ (ರಾಮನಗರಂ).—ಸ್ವಾಮಿ, ಈಗ ನಮ್ಮ ಮುಂದೆ ಇರತಕ್ಕ ವರದಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸುತ್ತ ಸೆಲೆಕ್ಟ್ ಸಮಿತಿಯವರು ಇಷ್ಟು ಅತ್ಯಲ್ಪ ಕಾಲದಲ್ಲಿ ಇಂಥ ಒಂದು ದೊಡ್ಡ ಮಸೂದೆಯನ್ನು ಪರಿಶೀಲಿಸಿ ಸುಮಾರು 338 ಪುಟಗಳಿರತಕ್ಕ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಹಿಂದೆ ನಮ್ಮ ಮುಂದೆ ಬಂದಿದ್ದ ಮಸೂದೆಗೂ, ಈಗ ನಮ್ಮ ಮುಂದೆ ಬಂದಿರತಕ್ಕ ಮಸೂದೆಗೂ ಬಹಳ ಬದಲಾವಣೆ ಆಗಿದೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಅವರು ಇದರಲ್ಲಿ ಬಹಳ ಉಪಯುಕ್ತವಾದ ಬದಲಾವಣೆಗಳನ್ನು ಮಾಡಿದ್ದಾರೆ. ಅವರು ಹಾಗೆ ಮಾಡಿರತಕ್ಕ ವರದಿಯನ್ನು ಸಂಕ್ಷೇಪವಾಗಿ ವಿವರಿಸಲು ಅಪೇಕ್ಷೆಪಡುತ್ತೇನೆ.

ಈ ಹಿಂದೆ ಜಾರಿಯಲ್ಲಿದ್ದ ಕಾನೂನಿನ ಪ್ರಕಾರ ಟೌನ್ ಮುನಿಸಿಪಾಲಿಟಿಗಳಿಗೆ ಸ್ತ್ರೀಯರ ಪ್ರಾತಿನಿಧ್ಯವಿರಲಿಲ್ಲ. ಅದೊಂದು ದೊಡ್ಡ ಲೋಪವೆಂದೇ ನಾನು ಭಾವಿಸುತ್ತೇನೆ. ಅಂಥ ಒಂದು ಲೋಪವನ್ನು ಈಗ ಈ ಸೆಲೆಕ್ಟ್ ಕಮಿಟಿಯವರು ಹೋಗಲಾಡಿಸಿದ್ದಾರೆ. ಇದರಿಂದ ಅನೇಕ ಮುನಿಸಿಪಾಲಿಟಿಗಳಲ್ಲಿ ಯಾವ ಒಂದು ವೈಷಮ್ಯಕ್ಕೆ ಅವಕಾಶವಿಲ್ಲದಂತೆ ಕೆಲಸಕಾರ್ಯಗಳು ಬಹಳ ಸಾಮರಸ್ಯದಿಂದ ನಡೆಯಲು ಅವಕಾಶ ಉಂಟಾಗಿದೆ. ಇನ್ನು ಮುಂದೆ ಇವುಗಳ ಕೆಲಸಕಾರ್ಯ ಬಹಳ ಸುಗಮದಿಂದ, ವಿಚಕ್ಷಣೆಯಿಂದ ನಡೆಯುತ್ತದೆಂಬ ನಂಬಿಕೆ ನನಗೆ ಸಂಪೂರ್ಣವಾಗಿರುತ್ತದೆ. ಇದರ ಅಗತ್ಯ ಬಹಳವಾಗಿತ್ತು. ಆದರೆ ಇಲ್ಲಿ ಕೆಲವು ಸದಸ್ಯರು ಮಹಿಳೆಯರಿಗೇಕೆ ಪ್ರತ್ಯೇಕ ಸ್ಥಾನಗಳಿರಬೇಕು ಎಂದು ಪ್ರಶ್ನಿಸಬಹುದು. ಮಹಿಳೆಯರು ಇಂಥ ಕಾರ್ಯಗಳಿಗೆ ಇಲ್ಲಿಯವರೆಗೂ ಮುಂದೆ ಬರುತ್ತಿದ್ದುದು ಬಹಳ ಕಡಮೆ. ಇತ್ತೀಚೆಗೆ ಹಿಂದುಳಿದ ಜನಾಂಗದವರು ಮುಂದೆ ಬಂದು ಅವರು ಈ ಸಭೆಗಳಲ್ಲಿ ಭಾಗವಹಿಸಬೇಕು ಎಂಬುದಾಗಿ ಕೇಳುತ್ತಿದ್ದಾರೆ. ಆದರೆ ಸ್ತ್ರೀಯರು ಮಾತ್ರ ಇನ್ನೂ ಹಿಂದೆಯೇ ಉಳಿದಿದ್ದಾರೆ. ಆದುದರಿಂದ ಈಗ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವನ್ನು ಇಟ್ಟಿರತಕ್ಕದ್ದು ಸಾಧುವಾಗಿದೆ.

ಆದರೆ ಈ ಹಿಂದೆ ಮಾತನಾಡಿದ ಒಬ್ಬ ಮಾನ್ಯ ಸದಸ್ಯರು ಷೆಡ್ಯೂಲ್ಡ್ ಟ್ರೈಬಿನವರ ವಿಚಾರವನ್ನೆತ್ತಿ ಅವರಿಗೆ ಪ್ರತ್ಯೇಕ ಸ್ಥಾನವನ್ನು ಕೊಡದೆ ಅವರನ್ನು ಹರಿಜನರಲ್ಲಿ ಸೇರಿಸಿರುತ್ತಾರೆಂದು ಮಾಡಿದ ಗೊಂದಲವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಇಲ್ಲಿಯತನಕ ಈ ಎರಡೂಕ್ಕೂ ಒಂದೇಸ್ಥಾನ, ಒಂದೇ ಕ್ಲಾಸಿನಲ್ಲಿದ್ದುವು. ಈಗ ಅವು ಪ್ರತ್ಯೇಕವಾಗಿರಬೇಕೆಂದು ಕೇಳುವುದು ಸಾಧುವಾದ್ದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಈ ಹಿಂದೆ ನಮ್ಮ ಪೌರಸಭೆಗಳಲ್ಲಿ ಪ್ರಶ್ನೆಗಳನ್ನು ಹಾಕಿ ಅವುಗಳಿಗೆ ಉತ್ತರ ಪಡೆಯುವಂಥ ಒಂದು ಅವಕಾಶವಿರಲಿಲ್ಲ. ಈಗ ಅದಕ್ಕೆ ಇಲ್ಲಿ ಒಂದು ಅವಕಾಶಮಾಡಿದ್ದಾರೆ. ಇದು ಬಹಳ ಉತ್ತಮವಾದ ಸಲಹೆ.

ಆದರೆ ಇನ್ನು ಇಲ್ಲಿ ಈಗ ಸೂಚಿಸಿರುವ ಪ್ರೆಸಿಡೆಂಟರ ಹಾಗೂ ವೈಸ್-ಪ್ರೆಸಿಡೆಂಟರ ಅವಧಿಯ ವಿಚಾರದಲ್ಲಿ ಹೇಳುವುದಾದರೆ ಇದು ಎಷ್ಟರಮಟ್ಟಿಗೆ ಸೂಕ್ತ ಎಂಬುದನ್ನು ನಾನು ಈಗಲೇ ಹೇಳಲಾರೆ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ ಎಷ್ಟು ಹೆಚ್ಚಿಗೆ ಇದ್ದರೆ ಅಷ್ಟೂ ಹೆಚ್ಚಿನ ಪ್ರಯೋಜನವಿದೆ ಎಂದು ನಾನು ಭಾವಿಸುತ್ತೇನೆ. ಆದರೆ ಈಗ ಇಲ್ಲಿ ಹೇಳಿರತಕ್ಕ ಒಂದು ವರ್ಷದ ಅವಧಿ ಸಾಲದು ಎಂದು ಹೇಳುತ್ತೇನೆ. ಈ ಅವಧಿಯನ್ನು ಇನ್ನೂ ಜಾಸ್ತಿ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಮುಂದೆ ಸರ್ಕಾರದವರೇ ರೂಲ್ಸ್ ಮತ್ತು ಬೈಲಾಗಳನ್ನು ಮಾಡಿ ಆ ಮಾದರಿಯಲ್ಲಿ ಮುನಿಸಿಪಾಲಿಟಿಗಳೂ, ಪೌರಸಭೆಗಳೂ ತಮ್ಮ ತಮ್ಮ ಬೈಲಾಗಳನ್ನು ರಚಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಇದು ಬಹಳ ಸಾಧುವಾಗಿದೆ. ಏಕೆಂದರೆ ಅಲ್ಲಿ ಇದಕ್ಕೆ ಬೇಕಾದ ಟೆಕ್ನಿಕಲ್ ಸಿಬ್ಬಂದಿ ವಗೈರೆ

ಇರುವುದಿಲ್ಲ. ಈ ಹಿಂದೆ ಇವುಗಳು ಒಂದು ವಿಚಕ್ಷಣೆಯಿಂದ ಕೆಲಸ ಮಾಡಿದಿರುವುದಕ್ಕೆ ಇದೇ ಮುಖ್ಯ ಕಾರಣ ಎಂದು ನಾನು ಹೇಳುತ್ತೇನೆ. ಇದರಲ್ಲಿ ಪೌರಸಭೆಗಳವರಿಗೆ ಡಿಸ್ಕ್ರಿಷನರಿ ಪವರನ್ನೂ ಕೊಟ್ಟಿದ್ದಾರೆ. ಇಲ್ಲಿ ಮುನಿಸಿಪಾಲಟಿಯವರೇ ಬೇಕಾದರೆ ಪ್ರಾಥಮಿಕ ಶಾಲೆಗಳನ್ನು ಕಟ್ಟಿಕೊಂಡು ಅವರೇ ಅವುಗಳನ್ನು ಮೇಂಟೇನ್‌ಮಾಡಬಹುದೆಂದು ಹೇಳಿದ್ದಾರೆ. ಇತ್ತೀಚೆಗೆ ಸರ್ಕಾರದಲ್ಲಿ ಹಣದ ಅಭಾವದಿಂದ ಪೌರಸಭೆಯವರು ತಾವೇ ಪ್ರೌಢಶಾಲೆಗಳನ್ನು ಕಟ್ಟಿಸಿಕೊಂಡು ಅವುಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದೇರೀತಿ ಮುನಿಸಿಪಾಲಟಿಗಳಿಗೂ ಮಾಡಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ.

ಇನ್ನು ಮುನಿಸಿಪಾಲಟಿಗಳಲ್ಲಿ ಬೀದಿಗಳ ಹೆಸರುಗಳನ್ನು ಬದಲಾವಣೆ ಮಾಡತಕ್ಕ ವಿಚಾರದಲ್ಲಿ ಅನೇಕ ಕಡೆ ಬಹಳವಾಗಿ ವಾದವಿವಾದಗಳು ನಡೆದಿರುತ್ತವೆ. ಈಗ ಸಲೆಕ್ಟ್ ಕಮಿಟಿಯವರು ಈ ಗೊಂದಲವನ್ನು ತಪ್ಪಿಸುವುದಕ್ಕೆ ಒಂದು ಒಳ್ಳೇ ಸೂಚನೆಯನ್ನು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಆ ಸಂಸ್ಥೆಯವರು ಸೂಚಿಸತಕ್ಕ ಬದಲಾವಣೆಯನ್ನು ಸರ್ಕಾರಕ್ಕೆ ಕಳುಹಿಸಿ ಅವರು ಒಪ್ಪಿದಲ್ಲಿ ಅದನ್ನು ಬದಲಾವಣೆ ಮಾಡಬಹುದೆಂದೂ ಮತ್ತು ಒಂದಾವರ್ತಿ ಹಾಗೆ ಬದಲಾವಣೆ ಮಾಡಿದ್ದನ್ನು ಪುನಃ ಬದಲಾಯಿಸಬಾರದೆಂದೂ ತಿಳಿಸಿದ್ದಾರೆ.

ಇನ್ನು ಮುನಿಸಿಪಾಲಟಿಗಳವರು ಬೇಕಾದಹಾಗೆ ಹಣವನ್ನು ಖರ್ಚುಮಾಡುತ್ತಾರೆ. ಆದರೆ ಅವರ ಸಿಬ್ಬಂದಿಗೆ ಸಂಬಳಕೊಡುವುದಕ್ಕೆ ಅವರಲ್ಲಿ ಎಷ್ಟೋಸಾರಿ ಹಣವಿರುವುದಿಲ್ಲ. ಅದಕ್ಕಾಗಿಯೇ ಈಗ ಮೂರು ತಿಂಗಳ ಹಣವನ್ನು ಬ್ಯಾಂಕಿನಲ್ಲಿ ಡಿಪಾಜಿಟ್ ಇಡಬೇಕೆಂದು ಹೇಳಿರುತ್ತಾರೆ. ಹಾಗೆಯೇ ಮುನಿಸಿಪಾಲಟಿಗಳಲ್ಲಿ ಆಗತಕ್ಕ ನಷ್ಟಗಳಿಗೆ ಆ ಕಾಲದಲ್ಲಿದ್ದ ಅಧ್ಯಕ್ಷ ಮತ್ತು ಉಪಾಧ್ಯಕ್ಷರೇ ಜವಾಬ್ದಾರರಾಗಿರಬೇಕೆಂದು ಹೇಳಿದ್ದಾರೆ. ಇದು ಬಹಳ ಸಾಧುವಾಗಿದೆ.

ಹೀಗಿಯೇ ಇದರಲ್ಲಿ ಅನೇಕ ಉತ್ಕೃಷ್ಟವಾದ ಬದಲಾವಣೆಗಳನ್ನು ಮಾಡಿದ್ದಾರೆ. ಇತ್ತೀಚೆಗೆ ಟೌನ್ ಮುನಿಸಿಪಾಲಟಿಗಳು ಬಡಾವಣೆಯಾಗಿ ಅಕ್ಕಪಕ್ಕದಲ್ಲಿರತಕ್ಕ ಊರುಗಳನ್ನು ಒಳಗೊಂಡಿರುತ್ತವೆ. ನಮ್ಮ ರಾಮನಗರದಲ್ಲಿ ಇಂಥ ಉದಾಹರಣೆಗಳಿವೆ. ಈ ಗ್ರಾಮಗಳನ್ನು ಆ ಮುನಿಸಿಪಾಲಟಿಗೆ ಸೇರಿಸುವುದಕ್ಕೆ ಒಂದು ಸರಿಯಾದ ಕಾನೂನಿಲ್ಲ. ಇದ್ದಿದ್ದರೆ ಈ ಮುನಿಸಿಪಾಲಟಿಗಳಿಗೂ ಅನೇಕ ತರಹದ ತೆರಿಗೆಗಳನ್ನು ಹಾಕಿ ವರಮಾನವನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತು. ಹೀಗೆ ಅಕ್ಕ ಪಕ್ಕದ ಗ್ರಾಮಗಳನ್ನು ಮುನಿಸಿಪಾಲಟಿಗೆ ಸೇರಿಸಿಕೊಳ್ಳುವ ಅವಕಾಶವಿರುವುದು ಒಳ್ಳೆಯದು. ನಮ್ಮ ರಾಮನಗರದ ಮುನಿಸಿಪಾಲಟಿಯ ಪಕ್ಕದಲ್ಲಿ ಅಯಿಜೂರು ಎಂಬ ಗ್ರಾಮವನ್ನು ಮುನಿಸಿಪಾಲಟಿಗೆ ಸೇರಿಸಿಕೊಂಡರೆ ಈ ಮುನಿಸಿಪಾಲಟಿಗೆ ಎಷ್ಟೋ ವರಮಾನ ಬರುತ್ತದೆ. ಇದನ್ನು ಮುನಿಸಿಪಾಲಟಿಗೆ ಸೇರಿಸಬೇಕು ಎಂದು ಅಲ್ಲಿನ ತಾಲ್ಲೂಕು ಬೋರ್ಡಿನವರೂ ಒಪ್ಪಿದ್ದಾರೆ. ಇದಕ್ಕೆ ಕಾನೂನಿನ ಸರಿಯಾದ ಬಲವಿಲ್ಲದಿದ್ದರೆ ಇದನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ನಾನು ಈ ಮೊದಲು ಹೇಳಿದಂತೆ ಅಯಿಜೂರು ಗ್ರಾಮದಲ್ಲಿ ಬರುವ ಪದಾರ್ಥಗಳ ಮೇಲೆ ತೆರಿಗೆ ಇಲ್ಲದೆ ಇರುವುದರಿಂದ ಇದನ್ನು ಮುನಿಸಿಪಾಲಟಿಗೆ ಸೇರಿಸಿಕೊಂಡರೆ ಇನ್ನೂ ಹೆಚ್ಚಿನ ವರಮಾನ ಪಡೆದುಕೊಳ್ಳಲು ಅವಕಾಶವಾಗುತ್ತದೆ. ಹೀಗೆ ಅಕ್ಕಪಕ್ಕದಲ್ಲಿರುವ ಗ್ರಾಮಗಳನ್ನು ಮುನಿಸಿಪಾಲಟಿಗಳವರು ಸೇರಿಸಿಕೊಳ್ಳಲು ಅವಕಾಶವನ್ನು ಮಾಡಿರುವುದು ಬಹಳ ಸಾಧುವಾಗಿದೆ ಮತ್ತು ಈ ರೀತಿ ಇರುವುದು ಒಳ್ಳೆಯದು.

2-30 P.M.

ಹಾಗೇ ಇನ್ನೂ ಷೆಡ್ಯೂಲಿನಲ್ಲಿ ಅನೇಕ ಹೊಸ ಹೊಸ ಐಟಂಗಳನ್ನು ಸೇರಿಸಿದ್ದಾರೆ. ಇದರಿಂದ ಪೌರಸಭೆಗಳಿಗೆ ವರಮಾನ ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ. ಅಲ್ಲದೆ ಮುನಿಸಿಪಾಲಟಿಯಲ್ಲಿರುವ ಸದಸ್ಯರು ಜನರ ಮೇಲೆ ಹೆಚ್ಚಿನ ತೆರಿಗೆ ಹೊರಿಸಿದರೆ ಅವರು ಜನಾನುರಾಗಿಗಳಾಗುವುದಿಲ್ಲ ಎನ್ನುವ ಭಯದಿಂದ ಹಾಕುತ್ತಿರಲಿಲ್ಲ. ಈಗ ಈ ಕಾನೂನನ್ನು ಮಾಡಿರುವುದರಿಂದ ಇದರ ಮೂಲಕ ಸರಕಾರ ಮಾಡಿದೆ ಎಂದು ಜನಕ್ಕೆ ಹೇಳಿ ತಮ್ಮ ಜವಾಬುದಾರಿಯನ್ನು ಚುನಾವಣಾ ಕಾಲದಲ್ಲಿ ತಪ್ಪಿಸಿಕೊಳ್ಳಬಹುದು ಎಂದು ಹೇಳಲು ಅನುಕೂಲವಾಗುವಂತೆ ಕೆಲವು ಬಾಬುಗಳಲ್ಲಿ ಮಿತಿಯನ್ನು ಮಿನಿಮಂ ಆಗಿ ಮತ್ತು ಕೆಲವಲ್ಲಿ ಮ್ಯಾಕ್ಸಿಮಂ ಆಗಿ ನಿಗದಿ ಮಾಡಿದ್ದಾರೆ. ಹೀಗೆ ನಿಗದಿ ಮಾಡಿರುವುದರಿಂದ ವರಮಾನವನ್ನು ಮುನಿಸಿಪಾಲಟಿಗಳವರು ಹೆಚ್ಚಿಸಿಕೊಳ್ಳಬಹುದು ಎಂದು ನನಗನಿಸುತ್ತದೆ. ಈ ಸಂದರ್ಭದಲ್ಲಿ ನನಗೆ ತೋರುವುದು ಇದರಲ್ಲಿರುವ ಕೆಲವು ಐಟಂಗಳನ್ನು ತೆಗೆಯುವುದು ಒಳ್ಳೆಯದು ಎಂದು ನನ್ನ ಭಾವನೆ. ಉದಾಹರಣೆಯಾಗಿ ಅನೇಕ ಟೌನ್ನು ಮುನಿಸಿಪಾಲಟಿಗಳಲ್ಲಿ ಅನೇಕ ವಿಧವಾದ ಜಮೀನುಗಳನ್ನು ಮಾಡತಕ್ಕ ರೈತರಿದ್ದಾರೆ. ಇವರುಗಳು ದನ, ಆಡು, ಮೇಕೆ ಇವುಗಳನ್ನು ಇಟ್ಟುಕೊಂಡಿರುತ್ತಾರೆ. ಹಾಗೆ ಎತ್ತು ಗಾಡಿಯೂ ಇರುತ್ತದೆ. ಮುನಿಸಿಪಾಲಟಿಯೊಳಗೆ ಇರತಕ್ಕ ರೈತಾಪಿ ಜನರು ಇವಕ್ಕೆ ತೆರಿಗೆ ಕೊಡುವುದನ್ನು ತಪ್ಪಿಸಬೇಕು. ಇವರ ಮೇಲೆ ತೆರಿಗೆ ಹೊರಿಸುವುದು ತಪ್ಪು. ಹೊಲದಿಂದ ಬರುವಾಗ ಎತ್ತು, ಆಡು, ಮೇಕೆಗಳನ್ನು ಮುನಿಸಿಪಲ್ ಏರಿಯಾದಲ್ಲಿ ತರುವಾಗ

(SRI GOPALA SALENNA)

ತೆರಿಗೆ ಕೊಡಬೇಕೆನ್ನುವುದು ಸರಿಯಲ್ಲ ಇದನ್ನು ಸೆಲೆಕ್ಟ್ ಕಮಿಟಿಯವರು ಯೋಚನೆ ಮಾಡಬೇಕಾಗಿತ್ತು.

ಹಾಗೆಯೇ ರೇಷ್ಮೆ ಗೂಡು ಮತ್ತು ಅದರಿಂದ ಉತ್ಪತ್ತಿ ಮಾಡುವ ರೇಷ್ಮೆಗಾಗಿ ತೆರಿಗೆ ಕೊಡಬೇಕೆಂದು ಮಾಡಿದ್ದಾರೆ. ಸಾಧಾರಣವಾಗಿ ರೇಷ್ಮೆ ಗೂಡನ್ನು ಮಾಡುವವರು ಗ್ರಾಮಾಂತರ ಪ್ರದೇಶಗಳಲ್ಲಿರುವವರು. ಇವರೆಲ್ಲಾ ತೆರಿಗೆಗಳನ್ನು ಕೊಡಬೇಕಾಗಿ ಬರುತ್ತದೆ. ಇವರುಗಳು ಗೂಡನ್ನು ಮಾರ್ಕೆಟ್ಟಿಗೆ ತರುವಾಗ ತೆರಿಗೆ ಕೊಡಬೇಕಾಗುತ್ತದೆ. ಪಟ್ಟಣಗಳಲ್ಲಿ ರೇಷ್ಮೆ ನೂಲುವವರು ಚರಕಾ ರೇಷ್ಮೆ ಮಾಡುವವರು ಅದನ್ನು ಮಾರುವಾಗ ತೆರಿಗೆ ಕೊಡಬೇಕೆಂದು ಇದೆ. ಆದರೆ ಹಳ್ಳಿಗಾಡು ಕಡೆಯಿಂದ ಬರುವ ಗೂಡುಗಳಿಗೆ ತೆರಿಗೆ ಹಾಕುವುದು ಸರಿಯಲ್ಲ. ಅದರಿಂದ ನಾನು ಹೇಳುವುದೇನೆಂದರೆ ಇಲ್ಲಿರುವ ಪಟ್ಟಿಯಿಂದ ರಾ ಸಿಲ್ಕು ಮತ್ತು ಕಕೂನ್ಸ್ ಎನ್ನುವುದನ್ನು ತೆಗೆದು ಈ ಬಾಬಿಗೆ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಒಂದು ತಿದ್ದುಪಡಿಯನ್ನೂ ಕಳುಹಿಸುವುದರಲ್ಲಿದ್ದೇನೆ.

ಒಟ್ಟಿನಲ್ಲಿ ಈ ಸಮಿತಿಯ ವರದಿಯನ್ನು ಇಲ್ಲಿರುವ ಸದಸ್ಯರು ಚೆನ್ನಾಗಿ ಪರಿಶೀಲನೆ ಮಾಡಿ ತಂದುದಕ್ಕಾಗಿ ಅವರನ್ನೂ ಅಭಿನಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳ ಸಂಬಂಧವಾಗಿರತಕ್ಕ ಈ ಮಸೂದೆಯ ಬಗ್ಗೆ ಜಂಟಿ ಸಮಿತಿಯವರು ಒಪ್ಪಿಸಿರುವ ಪ್ರಜಾಪ್ರಭುತ್ವದ ಮೂಲ ತತ್ವಕ್ಕೆ ವಿರೋಧವಾಗಿರುವುದರಿಂದ ಈ ವರದಿಯನ್ನು ನಾನು ವಿರೋಧಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಸ್ಥಳೀಯ ಸಂಸ್ಥೆಗಳು ಬೆಳೆಯಬೇಕು. ಸ್ಥಳೀಯ ಸಂಸ್ಥೆಗಳು ಬಲಗೊಳಿಸುವಂತಹ ಕಾನೂನನ್ನು ಮಾಡಬೇಕು. ಅದರಂತೆ ಈ ಸಂಸ್ಥೆಗಳನ್ನು ಕಟ್ಟಬೇಕು ಮತ್ತು ಅದಕ್ಕೆ ತಕ್ಕಂತಹ ತೆರಿಗೆಗಳನ್ನು ಹಾಕಬೇಕು. ಜನ ಯಾವ ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡು ಇಲ್ಲಿಗೆ ಬಂದಿದ್ದಾರೋ ಅಂತಹ ತತ್ವಕ್ಕೇ ತಿಲಾಂಜಲಿಯನ್ನು ಕೊಡತಕ್ಕಂತಹ ಅನೇಕ ವಿಚಾರಗಳನ್ನು ಈ ಮಸೂದೆಯಲ್ಲಿ ತರಲು ಪ್ರಯತ್ನ ಮಾಡಿದ್ದಾರೆ. ಒಂದು ಕಡೆ ಅಧಿಕಾರವನ್ನು ಡೀಸೆಂಟ್ರಲೈಸು ಮಾಡಬೇಕೆಂದು ಹೊರಟಿದ್ದಾರೆ. ಇನ್ನೊಂದು ಕಡೆ ಅದೇ ಅಧಿಕಾರವನ್ನು ಕಿತ್ತುಕೊಂಡು ಸರಕಾರದವರು ತಮ್ಮ ಕೈಯಲ್ಲಿಟ್ಟುಕೊಂಡು ನಡೆಸಲು ಅವಕಾಶ ಮಾಡಿಕೊಂಡಿದ್ದಾರೆ. ಈ ಮಸೂದೆಯಲ್ಲಿರುವುದು 21ನೇ ಕ್ಲಾಸಿನಲ್ಲಿರುವ ಚುನಾವಣೆಗಳ ವಿಚಾರ ಬಹು ಮುಖ್ಯವಾದುದು ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾವಣೆಗಳನ್ನು ನಡೆಸುವಾಗ ಆ ಸಂಬಂಧವಾಗಿ ತಕರಾರುಗಳನ್ನು ಹಾಕಲು ಹದಿನೈದು ದಿನಗಳ ಕಾಲಾವಕಾಶ ಕೊಟ್ಟಿರುವುದು ಬಹು ಕಡಮೆ. ಇದನ್ನು ಕೊನೆಯ ಪಕ್ಷ ಒಂದು ತಿಂಗಳಿನಷ್ಟಾದರೂ ಇರುವಂತೆ ಮಾಡವುದು ಅಗತ್ಯ. ಆ ರೀತಿ ಇದರಲ್ಲಿ ಅವಕಾಶವಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ ಸರಕಾರದ ಕಡೆಯಿಂದ ಕಾಪಿಗಳನ್ನು ಲೆಕ್ಕಪತ್ರಗಳನ್ನು ಬೇರೆ ಪಕ್ಷದವರಿಗೆ ತರಲು ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಅದರಿಂದ ಈಗಿರುವ 15 ದಿನಗಳಿಗೆ ಬದಲಾಗಿ ಒಂದು ತಿಂಗಳಿನಷ್ಟು ಜಾಸ್ತಿ ಮಾಡುವುದು ಒಳ್ಳೆಯದು. ಮಾನ್ಯ ಮಂತ್ರಿಗಳು ಎಲ್ಲ ವಿಚಾರಗಳನ್ನು ಹೇಳುತ್ತ ಅನೇಕ ಹೊಸ ಮಾದರಿಯ ತೆರಿಗೆಗಳನ್ನು ಜನರ ಮೇಲೆ ಹೊರಿಸಿ ಜನರ ಹೊರೆಯನ್ನು ಜಾಸ್ತಿಮಾಡುವಂತೆ ಯೋಚನೆ ಮಾಡಿರುವ ಹಾಗೆ ಕಾಣುತ್ತದೆ.

ಪಿಲಿಗ್ರಿಮ್ಸ್ ಟ್ಯಾಕ್ಸ್ ಹಾಕಬೇಕೆಂದು ಹೇಳಿದರು. ಅಂದರೆ ಯಾರಾದರೂ ದೇವಸ್ಥಾನಕ್ಕೆ, ಜಾತ್ರೆಗೆ ಬಂದರೆ ಅವರ ಮೇಲೆ ತೆರಿಗೆ ಹಾಕಬೇಕೆಂದಿದ್ದಾರೆ. ಈ ಜೆಸಿಯ ಕಂದಾಯ ಒಂದು ಬಾಕಿ ಇತ್ತು ಎಂದು ಕಾಣುತ್ತದೆ. ಇಂಥ ಜೆಸಿಯ ಕಂದಾಯ ತಂದು ಹಾಕಿರುವ ಕಾರಣ, ಈ ಸರಕಾರ ಬಹಳ ದಿವಸ ಇರುವುದಿಲ್ಲ ಎಂದು ಕಾಣುತ್ತದೆ. ಈ ಎಲ್ಲಾ ತೆರಿಗೆ ಹಾಗೂ ತಲೆಗಂದಾಯ ಹಾಕುತ್ತಿರುವುದನ್ನು ನೋಡಿದರೆ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಯಶಸ್ವಿಯಾಗಬಲ್ಲದು ಎನ್ನುವುದನ್ನು ಸರಕಾರ ಈಗಲಾದರೂ ಅರಿತುಕೊಂಡರೆ ಬಹಳ ಒಳ್ಳೆಯದು. ಮಾನ್ಯ ಮಂತ್ರಿಗಳೂ ಅರಿತುಕೊಂಡರೆ ಬಹಳ ಒಳ್ಳೆಯದು.

84ನೆಯ ಕ್ಲಾಜನ್ನು ನೋಡೋಣ. ಯಾವ ವಿಚಾರದಲ್ಲಿಯೂ ಸ್ಥಳೀಯ ಸಂಸ್ಥೆಗಳು ಬಹಳ ಪ್ರಬಲವಾಗಿ ಕೆಲಸ ಮಾಡಬೇಕೆಂದು ಹೇಳಿದರು. ಆದರೂ ಡಿಸ್ಸಿಪ್ಲಿನರಿ ಪವರ್ಸನ್ನು ಸರಕಾರ ಇಟ್ಟು ಕೊಂಡಿರುವುದನ್ನು ನೋಡಿದರೆ, ಇದು ಪ್ರಜಾಪ್ರಭುತ್ವದ ಲಕ್ಷಣ, ಇದು ಪ್ರಜಾಪ್ರಭುತ್ವದ ಮಾದರಿ ಎಂದು ಕಾಣುವುದಿಲ್ಲ.

ಕ್ಲಾಜು 173ನ್ನು ಬಹಳ ತೀವ್ರವಾಗಿ ನಾವು ವಿರೋಧಿಸುತ್ತಾ ಇದ್ದೇವೆ. ಮುನಿಸಿಪಾಲಟಿಗಳು ನೇರವಾಗಿ ಕೆಲಸ ಮಾಡಬೇಕು, ಮುನಿಸಿಪಾಲಟಿಗಳಿಗೆ ಅಧಿಕಾರವಿರಬೇಕೆಂದು ಹೇಳಿದರು. ಹಾಗಾದರೆ ಇಂಪ್ರೂವ್‌ಮೆಂಟ್ ಬೋರ್ಡಿನಿಂದ ಆಗತಕ್ಕಂಥ ಪ್ರಯೋಜನವೇನು? ಇಂಪ್ರೂವ್‌ಮೆಂಟ್

ಬೋರ್ಡನ್ನು ಸ್ಥಾಪನೆ ಮಾಡುವುದು ಸರ್ಕಾರ. ಆದ್ದರಿಂದ ಸರಕಾರದವರು ತಮಗೆ ಯಾರು ಬೇಕೋ ಅವರನ್ನು ಬೋರ್ಡಿನ ಚೇರ್ಮನ್ ಮಾಡಬಹುದು. ಇವರ ಪಕ್ಷದವರು ಇದ್ದರೆ ಅವರನ್ನು ವೈಸ್‌ಪ್ರೆಸಿಡೆಂಟ್ ಮಾಡಬಹುದು. ಅವರು ಸರಕಾರ ಹೇಳಿದಂತೆ ಕೆಲಸ ಮಾಡಿಕೊಂಡು ಇರುತ್ತಾರೆ. ಇಂಪ್ರೂವ್‌ಮೆಂಟ್ ಬೋರ್ಡು ಪ್ರತ್ಯೇಕವಾಗಿ ಏಕೆ ಇರಬೇಕು ? ಅದರ ಅಧಿಕಾರವನ್ನು ಮುನಿಸಿಪಾಲಟಿಗೇ ನೇರವಾಗಿ ಕೊಡಲಿ. ಅದಕ್ಕೆ ಎಲ್ಲಾ ವ್ಯವಸ್ಥೆಯನ್ನು ಸರಕಾರ ಮಾಡಲಿ. ಅದನ್ನು ಬಿಟ್ಟು ಬೋರ್ಡಿಗೆ ಖಾಸಗಿಯವರನ್ನು ನಾಮಿನೇಟ್ ಮಾಡಬೇಕೆಂದಿರುವುದನ್ನು ನೋಡಿ ಏನು ಹೇಳಬೇಕು ?—ಈ ದೌರ್ಜನ್ಯ ಮತ್ತು ದುರಾಡಳಿತದಿಂದ ಪ್ರಜಾಪ್ರಭುತ್ವ ಉಳಿಯುವಂತೆ ಕಾಣುತ್ತಾ ಇಲ್ಲ. ಒಂದು ಕಡೆ ಮುನಿಸಿಪಾಲಟಿಗೆ ಸಂಪೂರ್ಣ ಅಧಿಕಾರವಿರಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಇಂಪ್ರೂವ್‌ಮೆಂಟ್ ಬೋರ್ಡು ಮಾಡುತ್ತೇವೆಂದು ಹೇಳುತ್ತಾರೆ. ಈ ಬೋರ್ಡಿಗೆ ಸರಕಾರದ ಹಣಕೊಟ್ಟು ಚೇರ್ಮನ್ನರನ್ನು ನಾಮಿನೇಟ್ ಮಾಡಿ, ಅವರನ್ನು ಸರಕಾರದ ಕೈಗೊಂಬೆಯಾಗಿ ಇಟ್ಟುಕೊಳ್ಳಬೇಕೆಂದು ಈ ಬೋರ್ಡನ್ನು ಸರಕಾರದ ರಕ್ಷಣೆಗೆ ಇಟ್ಟುಕೊಂಡು ಸರಕಾರದ ಖಜಾನೆಯನ್ನು ಖಾಲಿ ಮಾಡುತ್ತಾರೆ. ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋದಾಗಲೂ, ಸರಕಾರದವರು ಸೆಲೆಕ್ಟ್ ಕಮಿಟಿಯ ಜನಗಳ ಕಣ್ಣು ಮುಚ್ಚಿಸಿ, ಪ್ರಯೋಜನವಿಲ್ಲದ ಇಂಥಿಂಥ......

Mr. SPEAKER.—I do not like the Hon'ble member to make any comment upon the Members of the Select Committee. He may feel like that but he must not express it on the floor of the House.

ಶ್ರೀ ಕೆ. ಲಕ್ಕಪ್ಪ.—ಈ ರೀತಿ ಖಾಸಗಿ ಜನಗಳಿಗೆ ಅವಕಾಶ ಕೊಡುವಂಥ, ತಮಗೆ ಬೇಕಾದಂಥವರನ್ನು ನಾಮಿನೇಟ್ ಮಾಡಿಕೊಳ್ಳುವ ಅಧಿಕಾರವುಳ್ಳ ಪ್ರಾವಿಷನ್ನುಗಳನ್ನು ತೆಗೆದುಹಾಕುವುದು ಒಳ್ಳೆಯದು.

ಶ್ರೀ ಕೆ. ಪುಟ್ಟಸ್ವಾಮಿ.—ತಮ್ಮ ಪಕ್ಷದ ಸದಸ್ಯರೂ ಇದ್ದರು. ತಮಗೆ ಅವರಲ್ಲಿ ಭರವಸೆ ಇಲ್ಲದೆ ಹೋಗಿದ್ದರೆ, ತಾವೇ ಕಮಿಟಿಗೆ ಬರಬಹುದಾಗಿತ್ತು.

ಶ್ರೀ ಕೆ. ಲಕ್ಕಪ್ಪ.—ಭರವಸೆ ಇದೆ. ಇಂಥ ಪ್ರತ್ಯೇಕ ಬೋರ್ಡುಗಳು ಅನಾವಶ್ಯಕ. ಮುನಿಸಿಪಾಲಟಿಗಳು ಬೆಳೆಯಬೇಕು, ಅವುಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕೆಂಬ ಇರಾದೆ ಇದ್ದರೆ, ಸರಕಾರ ಮುನಿಸಿಪಾಲಟಿಗಳಿಗೇ ನೇರವಾಗಿ ಸಹಾಯ ಮಾಡಬೇಕು. ಬೋರ್ಡು ಇಲ್ಲದೆ ಇರತಕ್ಕಂಥ ಮುನಿಸಿಪಾಲಟಿ ರಚನೆ ಮಾಡಿದ್ದರೆ ಬಹಳ ಸೂಕ್ತವಾಗಿತ್ತು ಎಂದು ನಾನು ಈ ಸಭೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

310ನೆಯ ಕ್ಲಾಜಿನ ಪ್ರಕಾರ ಸರಕಾರಕ್ಕಿರುವ ಅಧಿಕಾರವನ್ನು ಯಾರೂ ಬೇಕಾದರೂ ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವುಂಟು.

> "The Government may order an inquiry to be held by any officer appointed by it in this behalf......" ಎಂದಿದೆ.

ಅದಕ್ಕೆ ಉದಾಹರಣೆ ಹೇಳಬೇಕಾದರೆ.. ...

Mr. SPEAKER.—There is not a word changed in that.

ಶ್ರೀ ಕೆ. ಲಕ್ಕಪ್ಪ.—ಬದಲಾವಣೆಯಾಗಿದ್ದರೆ ಬಹಳ ಚೆನ್ನಾಗಿತ್ತು ಎಂದು ಹೇಳುತ್ತಿದ್ದೇನೆ.

I am commenting upon the defects of the provisions.

Mr. SPEAKER.—The Hon'ble Member has said all that before.

ಶ್ರೀ ಕೆ. ಲಕ್ಕಪ್ಪ.—ಕೆಲವು ಮುನಿಸಿಪಾಲಟಿಗಳು ಸರಿಯಾಗಿ ನಡೆಯುತ್ತಾ ಇದ್ದರೂ, ರಿಪೋರ್ಟು ತರಿಸಿಕೊಂಡು ಸರಕಾರ ಎಷ್ಟೋ ಮುನಿಸಿಪಾಲಟಿಗಳನ್ನು ಸೂಪರ್‌ಸೀಡ್ ಮಾಡಿರತಕ್ಕಂಥಾದ್ದು ಈ ಸಭೆಯ ಮತ್ತು ಸರಕಾರದ ಗಮನಕ್ಕೆ ಬಂದಿದೆ. ಅದೇ ವಿರೋಧ ಪಕ್ಷದವರು ಯಾವುದಾದರೂ ಮುನಿಸಿಪಾಲಟಿ ಸರಿಯಾಗಿ ನಡೆಯುತ್ತಾ ಇಲ್ಲವೆಂದು ಹೇಳಿದರೆ, ಅದರ ಕಡೆ ಸರಕಾರ ಗಮನ ಕೊಟ್ಟಿಲ್ಲ. ತುಮಕೂರು ಮುನಿಸಿಪಾಲಟಿ ಸರಿಯಾಗಿ ನಡೆಯುತ್ತಾ ಇಲ್ಲ. ತುಮಕೂರು ಮುನಿಸಿಪಾಲಟಿಯಲ್ಲಿ ಅಧಿಕಾರ ದುರುಪಯೋಗವಾಗುತ್ತಿದೆ, ಅಲ್ಲಿ ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ ಎಂದು ಮುನಿಸಿಪಲ್ ಪ್ರೆಸಿಡೆಂಟರೇ ಹೇಳಿಕೆ ಕೊಟ್ಟಿದ್ದಾರೆ. ಅಂಥ ಮುನಿಸಿ

(ಶ್ರೀ ಕೆ. ಲಕ್ಕಪ್ಪ)

ಪಾಲಿಟಿಯ ವಿರುದ್ಧ ಎಷ್ಟು ದೂರು ಕೊಟ್ಟರೂ ಏನೂ ಆಗಿಲ್ಲ. ಮಾನ್ಯ ಮಂತ್ರಿಗಳೂ ಎರಡುಸಾರಿ ಭೇಟಿ ಕೊಟ್ಟರೂ, ಏನೂ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಒಂದು ನಿದರ್ಶನವಾಗಿ ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಇಂಥ ಕಾನೂನನ್ನು ಜಾರಿಗೆ ತರುವುದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೆಂಬುದನ್ನು ಯೋಚನೆ ಮಾಡಬೇಕು.

Mr. SPEAKER —We are not debating upon the administration.

ಶ್ರೀ ಕೆ. ಲಕ್ಕಪ್ಪ.—ಇದನ್ನು ಬದಲಾಯಿಸದೆ ಹೋದರೆ, ಇವರು ಮಾಡುವ ಅನ್ಯಾಯದಿಂದ ಏನೇನೋ ಆಗಬಹುದು. ತುಮಕೂರು ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡುವುದಕ್ಕೆ ಅವಕಾಶವಿತ್ತು. ಅವರ ಮೇಲೆ ಎಷ್ಟು ದೂರುಗಳನ್ನು ಕೊಟ್ಟಿದ್ದರೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಏಕೆ ತೆಗೆದುಕೊಳ್ಳಲಿಲ್ಲ ಎನ್ನುವುದು ಗೊತ್ತಾಗಲಿಲ್ಲ. ಮುನಿಸಿಪಲ್ ಪ್ರಸಿಡೆಂಟರು ಮಂತ್ರಿಗಳ ಸ್ನೇಹಿತರೋ, ಅಥವಾ ಯಾವ ಮಂತ್ರಿಗಳಿಗೆ ಬೇಕಾದ ಜನವೊ, ಅಥವಾ ಆಳುವ ಪಕ್ಷಕ್ಕೆ ಬೇಕಾದ ಜನ ಎಂದೋ.....

Mr. SPEAKER.—Does the Hon'ble Member want this clause to be deleted in spite of what he says ? Does he want the Government to supersede that Municipality ?

ಶ್ರೀ ಕೆ. ಲಕ್ಕಪ್ಪ.—ಸೂಪರ್‌ಸೀಡ್ ಮಾಡಿ ಎಂದು ಹೇಳುತ್ತಾ ಇಲ್ಲ. ಈ ರೀತಿ ಅಧಿಕಾರ ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವುದಕ್ಕೆ ಉದಾಹರಣೆಯನ್ನು ಕೊಡುತ್ತಾ ಇದ್ದೇನೆ.

Mr. SPEAKER.—That they did not act in a particular occasion is the greivence ; it means that there must be a provision.

Sri K. LAKKAPPA.—I am saying how they can take shelter under this provision this side or that side.

Mr. SPEAKER.—What is the opinion of the Hon'ble Member ? Does he want the clause to be there or should it be deleted ?

ಶ್ರೀ ಕೆ. ಲಕ್ಕಪ್ಪ.—ಈ ವಿಚಾರಣೆ ಮಾಡತಕ್ಕಂಥ ಅಧಿಕಾರ ಸರಕಾರಕ್ಕೆ ನೇರವಾಗಿ ಇರಬಾರದು. ಇದನ್ನು ನೇರವಾಗಿ ಯಾವುದಾದರೂ ಅಧಿಕಾರಿಗೆ ಕೊಡಬೇಕು. ಸರಕಾರಕ್ಕೆ ವರದಿ ಬಂದ ಕೂಡಲೆ ಅವರು ವಿಚಾರಣೆ ಆರ್ಡರ್ ಮಾಡಿದರೂ ಮಾಡಬಹುದು. ಬಿಟ್ಟರೂ ಬಿಡಬಹುದು.

320 ನೆಯ ಕ್ಲಾಜಿನಲ್ಲಿ Power to transfer officers ಎಂದು ಇದೆ. ಮುನಿಸಿಪಾಲಿಟಿಗಳಿಗೆ ಎಲ್ಲ ಅಧಿಕಾರವನ್ನೂ ಕೊಡಬೇಕೆಂದು ಹೇಳುವಾಗ ಅಧಿಕಾರಿಗಳನ್ನು ವರ್ಗ ಮಾಡತಕ್ಕ ವಿಚಾರದಲ್ಲಿ ಮಾತ್ರ ನೇರವಾಗಿ ಸರ್ಕಾರದವರೇ ಇಟ್ಟುಕೊಂಡಿರುವುದನ್ನು ನೋಡಿದರೆ ಇದರಲ್ಲಿ ಏನೋ ವಿಶೇಷವಿರಬೇಕೆಂಬ ಸಂಶಯ ಬರುತ್ತದೆ. ಮುನಿಸಿಪಾಲಿಟಿಗಳಲ್ಲಿ ಇರುವವರೆಲ್ಲ ಸಣ್ಣ ಪುಟ್ಟ ಅಧಿಕಾರಿಗಳು. ಸಾವಿರಾರು ರೂಪಾಯಿ ಸಂಬಳ ಪಡೆಯತಕ್ಕ ಅಧಿಕಾರಿಗಳು ಯಾರೂ ಇರುವುದಿಲ್ಲ. ಇಂಥ ಸಣ್ಣಪುಟ್ಟ ಅಧಿಕಾರಿಗಳ ಟ್ರಾನ್ಸ್‌ಫರ್ ವಗೈರೆಗಳಲ್ಲಿ ಸರ್ಕಾರು ಕೈ ಹಾಕಬೇಕು ಎನ್ನುವುದು ಬಹಳ ತಪ್ಪು.

Mr. SPEAKER.—If there is going to be a common service for all municipalities, who has to transfer them from one municipality to another ?

ಶ್ರೀ ಕೆ. ಲಕ್ಕಪ್ಪ.—ಅದನ್ನು ಡೆಪ್ಯುಟಿ ಕಮಿಷನರು ಮಾಡಬಹುದು. ಸರ್ಕಾರವೇ ಏಕೆ ಮಾಡಬೇಕು ? ಸರ್ಕಾರ ಯಾವ ಅಧಿಕಾರಿಗಳನ್ನೂ ಬೇಕಾದರೂ ವರ್ಗ ಮಾಡಬಹುದು ಎಂದರೆ ಯಾವ ಅಧಿಕಾರಿ ಏನು ಅನ್ಯಾಯ ಮಾಡುತ್ತಾನೆ ಎಂದು ಸಾರ್ವಜನಿಕರು ಯಾರೂ ದೂರನ್ನು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಯಾವ ಸರ್ಕಾರ ಬಲವಾಗಿ ಅಧಿಕಾರದಲ್ಲಿ ಇರುತ್ತದೆಯೋ ಅಲ್ಲಿಯವರೆಗೂ ಅವರಿಗೆ ಬೇಕಾದವರ ಮೇಲೆ ಏನೂ ದೂರುಗಳನ್ನು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಇಂಥ ಅಧಿಕಾರಿಗಳಿಗೆ ಆಶ್ರಯ ಕೊಟ್ಟು ಅವರ ಮೂಲಕ ತಮ್ಮ ಅಧಿಕಾರವನ್ನು ಹಿಡಿದುಕೊಳ್ಳಬೇಕೆಂಬ ಒಂದೇ ಒಂದು ದೃಷ್ಟಿ ಇರುತ್ತದೆ. ಅಲ್ಲಿ ಇರುವವರೆಲ್ಲ ಸಣ್ಣ ಪುಟ್ಟ ನೌಕರರಾದುದರಿಂದ ಅವರನ್ನು ವರ್ಗ ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಅಥವಾ ಕಮಿಷನರಿಗೆ ಕೊಡಬೇಕು. ಸರ್ಕಾರದವರೇ ನೇರವಾಗಿ ಆ ಅಧಿಕಾರವನ್ನು ಇಟ್ಟುಕೊಳ್ಳುವುದು ಸರಿಯಲ್ಲ; ಇದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಕೆಲವು ಮುನಿಸಿಪಾಲಿಟಿಗಳವರು ಮುಜರಾಯಿಗೆ ಸಂಬಂಧಪಟ್ಟಂಥ ಸ್ಥಳಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಅವಕಾಶವನ್ನು ತೆಗೆದುಕೊಳ್ಳುತ್ತಿದ್ದಾರೆ. ಮುಜರಾಯಿ ಇಲಾಖೆ ಬೇರೆ ಇದೆ. ಆದರೂ ಸರ್ಕಾರ ಕೆಲವು ಸಂದರ್ಭಗಳಲ್ಲಿ ಮುನಿಸಿಪಾಲಿಟಿಗಳಿಗೆ ಬೆಂಬಲ ಕೊಡತಕ್ಕ ನಿದರ್ಶನಗಳು ನಮ್ಮ ಕಣ್ಣಿಗೆ ಬಿದ್ದಿವೆ. ಮುಜರಾಯಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಕೈ ಹಾಕಿರತಕ್ಕ ವಿಚಾರ ಬಂದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಈ ಮಸೂದೆಯಲ್ಲಿ ಇರಬೇಕು. ಅದು ಇದ್ದರೆ ಬಹಳ ಒಳ್ಳೆಯದು. ಇದಕ್ಕೆ ಒಂದು ನಿದರ್ಶನವನ್ನು ಹೇಳುತ್ತೇನೆ. ತುಮಕೂರಿನಲ್ಲಿ ಮುಜರಾಯಿ ಸಂಸ್ಥೆಗೆ ಸಂಬಂಧಪಟ್ಟಂಥ ಜಮೀನನ್ನು ಸರ್ಕಾರ ಹಾಗೂ ಒಬ್ಬರು ಮಂತ್ರಿಗಳು ಮುನಿಸಿಪಾಲಿಟಿಗೆ ಸೇರಿಸಿಬಿಟ್ಟು ಮನೆಗಳನ್ನು ಕಟ್ಟಿಕೊಳ್ಳಲು ಕೊಟ್ಟಿರುತ್ತಾರೆ. ಆ ಜಾಗವನ್ನು ತಮಗೆ ಬೇಕಾಗಿರತಕ್ಕ ಮನುಷ್ಯರಿಗೆ ಮುನಿಸಿಪಾಲಿಟಿಗೆ ಸೇರಿದೆ ಎಂದು ಕೊಟ್ಟು ಲಕ್ಷಾಂತರ ರೂಪಾಯಿ ಬರತಕ್ಕದ್ದನ್ನು ಹಾಳು ಮಾಡಿರತಕ್ಕ ನಿದರ್ಶನ ಕೂಡ ಇದೆ. ಇಂಥದ್ದನ್ನು ತಪ್ಪಿಸತಕ್ಕದ್ದು ಮುಖ್ಯ.

Mr. SPEAKER.—If Trust property has been wrongly taken, it is a matter for Trust and it is not a subject for this Debate.

ಶ್ರೀ ಕೆ. ಲಕ್ಕಪ್ಪ.—ಅಂಥದ್ದನ್ನು ತಪ್ಪಿಸಲು ಈ ಮಸೂದೆಯಲ್ಲಿಯೇ ಒಂದು ಕ್ಲಾಜನ್ನು ಸೇರಿಸಿದರೆ ಒಳ್ಳೆಯದು. ಮಂತ್ರಿಗಳು ಯಾವಾಗಲಾದರೂ ಬಂದಾಗ ಆ ಬಗ್ಗೆ ವಿಚಾರ ಮಾಡಿದರೆ ಒಳ್ಳೆಯದಾಗಬಹುದೋ ಏನೋ ಎಂದು ಹೇಳುತ್ತಿದ್ದೇನೆ.

ಇಷ್ಟು ವಿಚಾರಗಳನ್ನು ಹೇಳಿ ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆ.

Mr. SPEAKER.—Sri Ganji Veerappa will speak obsolutely to the point.

† Sri GANJI VEERAPPA (Harihar).—Mr. Speaker, Sir, I will bear in mind the suggestion made by the Hon'ble Speaker. With regard to this Bill, I was hearing the criticism of Sri Lakkappa as well as of Sri Sunthankar. And Sri Sunthankar went to the extent of saying that it was a highly retrograde measure and that the Bill sought to take away the powers vested in the municipal councils and that Government wanted to arrogate to themselves all their powers and functions and have absolute control over the functions of the municipalities. If we go into details of the Bill and the report made by the Select Committee. I wish to suggest that no such fears need be entertained and such criticism will be unwarranted. At the same time, I want to make a few suggestions to the Government to consider. These suggestions are based upon the recommendations made by the Joint Select Committee in this regard.

With regard to one point...in fact Sri Gopala Salenna and also Sri Allum Karibasappa suggested whether there should be a single member constituency, or there should be a multi-member constitueucy we may remember that in the erstwhile State of Mysore, according to the previous law, we used to have a number of wards in a particular municipal council area and the wards used to have three, four or five members. At any rate, it was not less than three members. It was a multi-member system. Later on, it was changed to a single-member system once again It was a very debatable point. Lots of representations were made to Government that there were many innumerable evils in the single member constituencies. I am one of those who strongly believe, and I may assure the House that I have some experience in these municipal elections for the last 20 to 25 years, that the single member constituencies contain a number of evils. These evils are there particularly in small constituencies consisting of two to three

(SRI GANJI VEERAPPA)

hundred voters. I would say that in such constituencies a man who is very prominent or a man who can appeal to the religious sentiments or communal sentiments of the area, or a man who can purchase the few votes there...because in our system of elections, we have not done away this possibility or probability of buying votes...can become a member. How far such a member can carry on his functions and duties as a member, of course, is a debatable matter and also a suspicious matter. Therefore, I feel it is better to have the multi-member system. The larger number of representatives, and the larger area, the lesser will be the scope for such evils influences to work. I do not know if my friends from South Kanara will still feel that single member constituencies should be continued in future also I wish to say that the multi-member system is good and I appeal to them to retain it.

12 ವರ್ಷಕ್ಕೆ ಮೇಲ್ಪಟ್ಟವರಿಗೆಲ್ಲ 50 ನಯೇಪೈಸೆವರೆಗೂ ತಲೆಕಂದಾಯ ತೆಗೆದುಕೊಳ್ಳಬೇಕೆಂದು 137ನೆಯ ಕ್ಲಾಜನ್ನು ಹೊಸದಾಗಿ ಸೇರಿಸಿದ್ದಾರೆ. ಈ ತರಹ ತೆರಿಗೆಯನ್ನು ತೆಗೆದುಕೊಳ್ಳಬೇಕಾದರೆ ಕಾರಣವೇನಿರಬೇಕು ಎಂದರೆ, ಜನರು ಇಳಿದುಕೊಳ್ಳುವುದಕ್ಕೆ ಛತ್ರಗಳನ್ನು ಕಟ್ಟಿಸಿ ಅಥವಾ ಇತರ ಅನುಕೂಲಗಳನ್ನು ಕಲ್ಪಿಸಿ ಅದನ್ನು ಉಪಯೋಗಿಸಿಕೊಳ್ಳುವವರಿಗೆ ತೆರಿಗೆಯನ್ನು ಹಾಕಿ ಅದರಿಂದ ವಸೂಲಾಗುವ ಹಣದಿಂದ ಆ ಕೆಲಸವನ್ನು ನೆರವೇರಿಸುವುದಕ್ಕೆ ಏನಾದರೂ ಹಣವನ್ನು ತೆಗೆದುಕೊಳ್ಳಬಹುದು. ಅದನ್ನು ಬಿಟ್ಟು ಹೀಗೆ ಮಾಡಬೇಕಾದರೆ ನಾವು ಏಕೆ ಕುಳಿತಿದ್ದೇವೆ, ಯಾವ ವಿಚಾರದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎನ್ನುವ ನಿಜವಾದ ಅರಿವು ಇಲ್ಲವೇ ಇಲ್ಲ, ಗುರಿ ಏನು ? ಎನ್ನುವುದು ಮೊದಲೇ ಇಲ್ಲ, ಜನಜೀವನ ಹಸನಾಗಿಲ್ಲ, ಅದಕ್ಕಾಗಿ ಕೆಲಸ ಮಾಡಿಲ್ಲ. ಒಂದು ಸಂಸ್ಥೆ ಎಂದು ಮಾಡಿದರೆ ಯಾವುದಾದರೂ ಮನುಷ್ಯನಿಗೆ ಸೇವೆ ಮಾಡಬೇಕು, ಆ ಸೇವೆಯಿಂದ ಏನು ಹಣ ಬರುತ್ತದೆಯೋ ಅದನ್ನು ತೆಗೆದುಕೊಂಡು ಬೇಕಾದ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದು. ಜನ ಇಳಿದುಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿ ಅದರಿಂದ ಹಣ ತೆಗೆದುಕೊಂಡು ಕೆಲಸಮಾಡುವುದು ಕಸಬುದಾರರ ಲಕ್ಷಣ. ಇದರಲ್ಲಿ ಎರಡು ಮುಖ್ಯವಾದ ಅಭಾವಗಳು ಎದ್ದು ಕಾಣುತ್ತವೆ. ಒಂದು ಇದನ್ನು ಮಾಡಿರುವವರಲ್ಲಿ ಮುಂದೆ ಏನು ಗುರಿ ಇರಬೇಕು ಎನ್ನುವುದರ ಅಭಾವವಿದೆ, ಎರಡನೆಯದು ಇದರ ಹಿನ್ನೆಲೆ ಏನು, ಆ ದೃಷ್ಟಿಯಿಂದ ಹೇಗೆ ಕೆಲಸ ಮಾಡಬೇಕು...

4-30 P. M.

Mr. SPEAKER.—Now the Hon'ble member is putting the chair and the House into a very serious disadvantage. This very useful sugges tion should have been made before the Bill was referred to the Select Committee.

ಶ್ರೀ ವಿ. ಎಂ. ದೇವ್.—ಹಿಂದೆ ಔರಂಗಜೇಬನ ಕಾಲದಲ್ಲಿ ತಲೆಗಂದಾಯವಿತ್ತು. ಅಲ್ಲಿಂದ ಈಚೆಗೆ ಇರಲಿಲ್ಲ. ಈ ತರಹ ಈಗ ಬಂದಿರುವುದು ಸಾಧುವಲ್ಲ. ಏಕೆ? ಏನು? ಎನ್ನುವುದು ಗೊತ್ತಿಲ್ಲದೆ ಇದನ್ನು ಮಾಡಿದ್ದಾರೆ. ಆದ್ದರಿಂದ ಇದನ್ನು ಮಾಡಿರುವುದರಲ್ಲಿ ಎಷ್ಟು ಅನಾಯಕತ್ವವಿದೆ ಎನ್ನುವುದು ಮನವರಿಕೆಯಾಗುತ್ತದೆ. ಇನ್ನು ಮುಂದಾದರೂ ಈ ತರಹ ಆಗದೆ ಇರಲಿ ಎನ್ನುವ ದೃಷ್ಟಿಯಿಂದ ಸ್ವಲ್ಪ ಅನಲೈಸ್ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇನೆ.

ಆರನೆ ಪುಟದಲ್ಲಿ 24ನೇ ಐಟಂನಲ್ಲಿ 80ನೇ ಕ್ಲಾಜಿನಲ್ಲಿ ಮಾಡಿರುವ ಬದಲಾವಣೆಯ ಬಗ್ಗೆ ಹೇಳಿದ್ದಾರೆ. ಇದನ್ನು ನೋಡಿದರೆ ನನಗನ್ನಿಸುತ್ತದೆ, ಇದರ ಗಾತ್ರವನ್ನು ಉಬ್ಬಿಸಿ ದೊಡ್ಡದು ಮಾಡಿದ್ದಾರೆ. ಈ ಸಬ್ ಕ್ಲಾಜ್ ಇಲ್ಲದೆ ಇದ್ದರೂ ಏನೂ ನ್ಯೂನತೆಯಾಗುತ್ತಿರಲಿಲ್ಲ. ಯಾರಾದರೂ ಅಂಥ ಮನುಷ್ಯ ಕೋರ್ಟಿಗೆ ಹೋಗಕೂಡದು ಮಾಡಕೂಡದು ಎಂದು ಇದೆ. ಯಾವತ್ತಿಗೂ ಕೂಡ ಆಡಳಿತದಲ್ಲಿ ಮುಖ್ಯವಾದ ಒಂದು ನೀತಿ ಏನು ಎಂದರೆ ಈ ತರಹ ಕಾಯಿದೆ, ಸರಿಯಾಗಿದೆಯೇ ಇಲ್ಲವೇ ಎನ್ನುವುದಕ್ಕೆ ಅದು ಒಂದು ಟೆಸ್ಟ್ ಸೂತ್ರ ಸಂಕ್ಷಿಪ್ತವಾಗಿಯೂ, ಅಭಿಪ್ರಾಯದ ಅಂಶ ನಿಷ್ಕಳವಾಗಿರಬೇಕು. ಇದರಿಂದ ನಿಜವಾಗಿಯೂ ಕೂಡ ಅಷ್ಟಿಷ್ಟು ಕೂಟ ಉಪಯೋಗವಾಗುವುದಿಲ್ಲ.

245ನೇ ಕ್ಲಾಜಿನಲ್ಲಿ ನೋಡಿದರೆ ಬಹಳ ಉಗ್ರವಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಎಲ್ಲ ಸರ್ಕಾರಗಳಿಗೂ ಒಂದು ಆದೇಶ ಬಂದಿದೆ ಏನೆಂದರೆ leper ಎಂದು ಉಪಯೋಗಿಸಬೇಕಾಗಿಲ್ಲ ಅದು ಕೆಟ್ಟ ಭಾವನೆ ಪ್ರಚೋದಿಸುವ ಕೆಟ್ಟ ಶಬ್ದ, person suffering from leprosy ಎಂದು ಉಪಯೋಗಿಸಬೇಕು ಎಂಬುದಾಗಿ. ಇಂಗ್ಲಿಷ್ ಭಾಷೆಯನ್ನು ಓದಿ ಅದರಲ್ಲಿರುವ ಕೆಟ್ಟದ್ದನ್ನು ತೆಗೆದುಕೊಳ್ಳುತ್ತಿದ್ದಾರೆಯೇ ಹೊರತು ಅದರಲ್ಲಿರುವ ಒಳ್ಳೆಯದನ್ನು ತೆಗೆದುಕೊಳ್ಳುತ್ತಿಲ್ಲ. ಕನ್ನಡದಲ್ಲಿ ಕುಷ್ಠರೋಗದವನು ಎಂದು ಹೇಳುತ್ತೇವೇ ಹೊರತು ಕುಷ್ಠಿ ಎಂಬ ಶಬ್ದವಿಲ್ಲ. ಇದನ್ನು ಸಭೆಗೆ ಮನವರಿಕೆಯಾಗಲು ಹೇಳುವುದಕ್ಕೆ ಪ್ರಯತ್ನಪಟ್ಟೆ.

Mr. SPEAKER.—Let us curtail the time-limit. The member can move an amendment.

ಶ್ರೀ ವಿ. ಎಂ. ದೇವ್.—ಹೀಗೆಲ್ಲ ಆಗಬೇಕಾದರೆ ಬಹಳ ದುಃಖವಾಗುತ್ತದೆ. ಆ ದೃಷ್ಟಿಯಿಂದ ನಾನು ಒಂದು ಯೋಚನೆ ಮಾಡಿದೆ. ಎಷ್ಟೋ ಜನ ತಿಳಿದವರನ್ನು ಕೇಳಿದೆ, ಅವರು ಒಂದು ಮಾತನ್ನು ಹೇಳಿದರು ಯಾರನ್ನಾದರೂ ಸದಸ್ಯರನ್ನು ಕಮಿಟಿಗಳಿಗೆ ಹಾಕಬೇಕಾದರೆ ಅವರಿಗೆ ಇಷ್ಟವಿರಲಿ, ಇಲ್ಲದೆ ಇರಲಿ, ಟಿ. ಎ ಬರುತ್ತದೆ ಎಂ. ಎ ಹಾಕುತ್ತಾರೆ ಎಂದು. ಇದು ಜನಜನಿತವಾಗಿ ಬಂದಿದೆ. ಅದನ್ನು ಹೇಳುವಾಗ ಅದು ಸರಿಯಾಗಿದೆ ಎಂದ ನಾನು ಹೇಳುತ್ತ ಇಲ್ಲ.

Mr. SPEAKER.—I won't allow the member to develop the point. It is not a fair reflection on the member. Don't repeat wrong things here.

ಶ್ರೀ ವಿ. ಎಂ. ದೇವ್.—ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ ವಿಧಾನಸಭಾ ಸದಸ್ಯರಿಗೆ ಅಪವಾದ ಬರುವ ರೀತಿಯಲ್ಲಿ ಹೇಳುವುದನ್ನು ಕೇಳಿ ನನಗೆ ದುಃಖವಾಗುತ್ತದೆ.

Mr. SPEAKER.—On behalf of the House the member denies it; he says that it is not like that.

ಶ್ರೀ ವಿ. ಎಂ. ದೇವ್.—ಇದರಲ್ಲಿ ಎಷ್ಟು ಸತ್ಯಾಂಶವಿದೆ ಎಂದು ನಾನು ಯೋಚನೆ ಮಾಡಿದೆ. ಆವಾಗ ನನಗನ್ನಿಸಿತು ಈ ಸಭೆಯಲ್ಲಿ ನಡೆಯುವ ಚರ್ಚೆಯ ಸಾರಾಂಶವನ್ನು ಕಮಿಟಿಯಲ್ಲಿರುವ ಸದಸ್ಯರಿಗೆ ಒದಗಿಸದೆ ಇರುವುದರಿಂದ ಹೀಗಾಗಬಹುದು ಎಂದು. ಇಲ್ಲಿ ಸದಸ್ಯರು ಏನರು ಹೇಳಿರುತ್ತಾರೆ ಅದನ್ನೆಲ್ಲ ಗಣನೆಗೆ ತೆಗೆದುಕೊಂಡು ಸೆಲೆಕ್ಟ್ ಕಮಿಟಿಯ ಸದಸ್ಯರು ತಿದ್ದುಪಡಿ ಮಾಡಬೇಕು. ಸರ್ಕಾರಕ್ಕೆ ಪದೇ ಪದೇ ಹೇಳಿ ಪ್ರಯೋಜನವಾಗಿಲ್ಲ. ಆದಕ್ಕಾಗಿ ತಾವು ತಮ್ಮ ಲೆಜಿಸ್ಲೇಚರ್ ಆಫೀಸಿನಲ್ಲಾದರೂ ಈ ಕೆಲಸವನ್ನು ಮಾಡಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—I will consider that seriously.

ಶ್ರೀ ವಿ. ಎಂ. ದೇವ್.—ನಾವು ಈ ಸಭೆಯಲ್ಲಿ ಬಂದು ಕುಳಿತುಕೊಳ್ಳುತ್ತೇವೆ. ನಾವು ಮಾಡುವ ಕಾರ್ಯಗಳು ಉಪಯೋಗವಾಗುವಂತಿರಬೇಕು. ನಮಗೂ ಸ್ವಲ್ಪ ಅನುಭವ ಬೇಕಾಗುತ್ತದೆ. ಆದುದರಿಂದ ವಿಧಾನ ಸಭಾ ಸದಸ್ಯರು ಆಯಾ ಮುನಿಸಿಪಾಲಿಟಿಗಳ ಎಕ್ಸ್-ಅಫಿಷಿಯೋ ಸದಸ್ಯರಾಗಿದ್ದರೆ ಅಲ್ಲಿಯ ಸ್ಥಿತಿಗತಿಗಳು ನಮಗೆ ನೇರವಾಗಿ ಎಂದರೆ ಸ್ವಂತ ಅನುಭವದಿಂದ ಬರುವುದಕ್ಕೆ ಒಂದು ದಾರಿಯಾಗುತ್ತದೆ. ಇದಕ್ಕೆ ಸಹಾಯವಾಗುವಂತೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವೆಂದು ನಾನು ಹೇಳುತ್ತೇನೆ.

Mr. SPEAKER.—The member wants, to prescribe the strength plus the members. How does he judge them? I may be representing the municipality when I am residing in Bangalore. It will be very difficult. Let him analyse it fully.

ಶ್ರೀ ವಿ. ಎಂ. ದೇವ್.—ನನಗನ್ನಿಸುವುದು ಇಷ್ಟು. ಮುನಿಸಿಪಲ್ ಬಿಲ್ ಬಂತು. ಆ ತರಹ ಮುನಿಸಿಪಾಲಿಟಿಯ ಅನುಭವ ನಮಗೆ ಇಲ್ಲದೆ ಇದ್ದರೆ ಇದರ ವಿಚಾರದಲ್ಲಿ ಚರ್ಚೆ ಮಾಡಲಿಕ್ಕೆ ತೊಂದರೆಯಾಗಬಹುದು. ಅನುಭವವಿಲ್ಲದೆ ಏನು ಮಾಡಬಲ್ಲೆವು?

Mr. SPEAKER.—All the members of Legislature are very competent and they know everything. Otherwise, how do they discuss the Budget?

Sri V. M. DEO.—How can we contribute anything unless we know what we are taking about. ನಮಗೆ ಅನುಭವ ಇರಬೇಕು ಆ ದೃಷ್ಟಿಯಿಂದ ಹೋಗಬೇಕು ವರ್ಷಕ್ಕೆ ಒಂದೊಂದು ಸಾರಿ ಅಧ್ಯಕ್ಷರ ಪದವಿಯನ್ನು ಟೌನ್ ಮುನಿಸಿಪಾಲಿಟಿಯಲ್ಲಾಗಲೀ ಸಿಟಿ ಮುನಿಸಿಪಾಲಿಟಿಯಲ್ಲಾಗಲೀ ಬದಲಾಯಿಸುವುದು ಒಳ್ಳೆಯದು ಎಂದು ಒಂದು ದೃಷ್ಟಿಯಿಂದ ಅನಿಸುತ್ತದೆ.

Mr. SPEAKER.—That is what is provided; some members object to it.

Sri V. M. DEO.—In some municipalities it is two years; it should be only one year. ಇಷ್ಟು ಹೇಳಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದು ಇಷ್ಟೆ ಈ ಸಂಸ್ಥೆಗಳಲ್ಲಿ ಎಷ್ಟೋ ನ್ಯೂನತೆಗಳು ಇವೆ ಆದರೂ ಸೆಲೆಕ್ಟ್ ಕಮಿಟಿಯವರು ಅವನ್ನು ಸರಿಪಡಿಸುವುದಕ್ಕೆ ಏನು ಮಾಡಿದ್ದಾರೆ ಎಂಬ ಸೂಚನೆ ಏನೇನೂ ಇಲ್ಲ—ಮೊದಲಿನಿಂದ ಕೊನೆಯವರೆಗೂ ಯಾವುದೂ ಕಾಣುವುದಿಲ್ಲ. ಹೀಗಿರುವಾಗ ಇಂಥಾ ಒಂದು ಕಾನೂನನ್ನು ನಾವು ಮಾಡಿದ್ದೇ ಆದರೆ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ ಒಬ್ಬ ಹೈಕೋರ್ಟ್ ಜಡ್ಜ್ ಹೇಳಿದ್ದಾರೆಯಂತೆ—ಬಹಳ ರಿಲಯಬಲ್ ಇನ್‌ಫರ್ಮೇಷನ್ ಬಂದಿರುವ ಪ್ರಕಾರ.

Mr. SPEAKER.—If it is confidential, let him not mention it before the House.

Sri V. M. DEO.—Not a confidential document. It is a court judgment—a public document. I do not know personally but I got the information which is reliable. ಅದರಲ್ಲಿ ಹೇಳಿರುವುದು ಇಷ್ಟೆ ಈ ಕಾನೂನುಗಳನ್ನು ಮಾಡುವಾಗ ಡ್ರಾಫ್ಟಿಂಗ್ ಸರಿಯಾಗಿರುವುದಿಲ್ಲ—ಯಾವ ಉದ್ದೇಶದಿಂದ ಮಾಡುತ್ತಾರೋ ಅದಕ್ಕೂ ಕಾನೂನು ಡ್ರಾಫ್ಟ್ ಮಾಡಿರುತ್ತಾರೋ ಅದರ ಹಿನ್ನೆಲೆಗೂ ಒಂದಕ್ಕೊಂದಕ್ಕೆ ಅಸಂಬದ್ಧವಾಗಿರುತ್ತದೆ ಎಂದು ಹೇಳಿರುತ್ತಾರೆ—ಯಾವಾಗಲಾದರೂ ಅದನ್ನು ತೋರಿಸುತ್ತೇನೆ. It is very bad drafting in saying that no court should have any jurisdiction.

Mr. SPEAKER.—How can that be?

ಶ್ರೀ ವಿ. ಎಂ. ದೇವ್.—ನಿರ್ದಿಷ್ಟವಾಗಿ ತಿಳಿದುಕೊಂಡು ಬಂದು ಪುರಾವೆ ಸರಿಯಾಗಿ ಕೊಟ್ಟು ಆ ವಿಚಾರದಲ್ಲಿ ಮಾತನಾಡಲು ಬಯಸುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ ನಮ್ಮ ದೇಶಕ್ಕೆ ಒಳ್ಳೆಯದಾಗಬೇಕಾದರೆ ಇದಕ್ಕೆ ಹಿನ್ನೆಲೆಯಾಗಿರುವುದು ಸ್ಥಳೀಯ ಸಂಸ್ಥೆಗಳು, ಅವೇ ರಾಜ್ಯದ ಜನರ ಜೀವನವನ್ನು ಹಸನು ಮಾಡತಕ್ಕ ಸಂಸ್ಥೆಗಳು ಅದಕ್ಕೆ ಯಾವ ರೀತಿಯಾದ ಸುಧಾರಣೆಗಳನ್ನು ಮಾಡಬೇಕೋ ಅದನ್ನು ಮಾಡಬೇಕು. ಈ ತರಹ ಮಸೂದೆಗಳು ಇನ್ನೊಂದು ಸಾರಿ ಬರದೇ ಇರಲಿ ಎಂದು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ಇರತಕ್ಕ ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟಿನ ಮೇಲೆ ಮಾತನಾಡಲು ಅವಕಾಶ ಕೊಟ್ಟಂಥಾ ಅಧ್ಯಕ್ಷರನ್ನು ವಂದಿಸುತ್ತಾ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನವನ್ನು ಒಂದೆರಡು ಸೆಕ್ಷನ್‌ಗಳ ಬಗ್ಗೆ ಸೆಳೆಯಬೇಕೆಂದು ನಿಂತಿದ್ದೇನೆ. ಸ್ವಾಮಿ ತಾವು ಸೆಕ್ಷನ್ 42 ಸಬ್ ಸೆಕ್ಷನ್ 9ರಲ್ಲಿ ಮುನಿಸಿಪಲ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮೇಲೆ ಅವಿಶ್ವಾಸವನ್ನು ತರುವುದಕ್ಕೆ ಕೌನ್ಸಿಲ್‌ನ ಮೂರನೆಯ ಎರಡು ಭಾಗದ ಸದಸ್ಯರಿಗೆ ಅವರ ಮೇಲೆ ವಿಶ್ವಾಸವಿಲ್ಲ ಎನ್ನುವುದನ್ನು ಸೂಚಿಸಿದರೆ ಅಧ್ಯಕ್ಷರು ತಮ್ಮ ಸ್ಥಾನದಿಂದ ನಿವೃತ್ತರಾಗಬೇಕೆಂದು ಹೇಳಿದ್ದೀರಿ. ಇದರಲ್ಲಿ ಒಂದು ಅನುಮಾನ ಪರಿಹಾರವಾಗಿಲ್ಲ; ಅದೇನೆಂದರೆ ಸೆಕ್ಷನ್ 42 ಸಬ್ ಸೆಕ್ಷನ್ 2ರಲ್ಲಿ ಏಳು ಜನ ಕೌನ್ಸಿಲ್ ಸದಸ್ಯರು ಸ್ಪೆಷಲ್ ಮೀಟಿಂಗ್ ಕರೆಯುವುದರ ಬಗ್ಗೆ ಒಂದು ಮೋಷನ್ ಮೂವ್ ಮಾಡಿದಾಗ ಆ

(ಶ್ರೀ ಹೆಚ್. ಡಿ. ದೇವೇಗೌಡ)

ಮೋಷನ್ ಒಂದು ವೇಳೆ ನಿಗದಿಯಾದ ತಾರೀಖಿನಲ್ಲಿ ಕ್ಯಾರಿ ಆಗದಿದ್ದ ಸಂದರ್ಭದಲ್ಲಿ ಅಥವಾ ಸಭೆಯಲ್ಲಿ ಕೋರಂ ಇಲ್ಲದೇ ಆ ಸ್ಪೆಷಲ್ ಮೀಟಿಂಗ್‌ನಲ್ಲಿ ಆ ಸಬ್ಜೆಕ್ಟು ಲ್ಯಾಪ್ಸ್ ಆದರೆ ಪುನಃ ಲ್ಯಾಪ್ಸ್ ಆದ ಆ ಸಬ್ಜೆಕ್ಟನ್ನು ತರುವುದಕ್ಕೆ ಅವಕಾಶವಿದೆಯೇ ಎಂಬುದು ಸ್ಪಷ್ಟವಾಗಬೇಕು. ಏಕಂದರೆ ಕೆಲವು ಸಂಸ್ಥಾನಗಳಲ್ಲಿರತಕ್ಕ ಮುನಿಸಿಪಾಲಿಟಿಗಳಲ್ಲಿ ಒಂದು ಸಬ್ಜೆಕ್ಟ್ ಲಾಪ್ಸ್ ಆದರೆ ಮೇಲೆ ಅದನ್ನು ಕನಿಷ್ಠ ಪಕ್ಷ ಒಂದು ವರ್ಷವಾದರೂ ತರಕೂಡದು ಎಂದು ಅಲ್ಲಿನ ಆಕ್ಟುಗಳಲ್ಲಿ ನಮೂದು ಮಾಡಿರುತ್ತಾರೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ಒಂದು ಅನುಮಾನ ಇದರಲ್ಲಿ ಪರಿಹಾರವಾಗಿಲ್ಲ, ಈ ಒಂದು ವಿಷಯದ ಮೇಲೆ ಇಂದು ಹೈ ಕೋರ್ಟಿನಲ್ಲಿ ರಿಟ್ ಅಡ್ಮಿಟ್ ಆಗಿದೆ, ಅದರ ಬಗ್ಗೆ ಇನ್ನೂ ತೀರ್ಪು ಆಗಿಲ್ಲ. ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಾಗ ಮೋಷನ್ ಮೂವ್ ಮಾಡಿದ 15 ದಿವಸದೊಳಗೆ ಅಧ್ಯಕ್ಷರು ಒಂದು ತಾರೀಖು ನಿಗದಿ ಮಾಡಿ ಮೋಷನ್ ಕ್ಯಾರಿ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಕಾಲದಲ್ಲಿ — ಒಂದು ಸ್ಪೆಷಲ್ ಮೀಟಿಂಗ್ ಯಾವ ಕಾರಣಕ್ಕಾಗಿ ಕರೆದಿತ್ತೋ, ಆ ಕಾರಣಕ್ಕೆ ಸಂಬಂಧಪಟ್ಟ ವಿಷಯ ಆ ಮೀಟಿಂಗ್‌ನಲ್ಲಿ ಕೋರಂ ಇಲ್ಲದೇ ಲ್ಯಾಪ್ಸ್ ಆದರೆ ಅದು ಲ್ಯಾಪ್ಸ್ ಆಯಿತು ಎಂದು ಅಧ್ಯಕ್ಷರು ಕಲ್ಪನೆ ಮಾಡಿದರೆ ಪುನಃ ಅದನ್ನು ತರತಕ್ಕ ಅವಕಾಶವಿದೆಯೇ ಇಲ್ಲವೇ ಎಂಬುದನ್ನು ತಾವು ಸ್ಪಷ್ಟ ಮಾಡಬೇಕು. ಒಂದು ವೇಳೆ ತಾವು ಹೇಳುವ ಹಾಗೆ ಲಾಪ್ಸ್ ಆದ ಸಬ್ಜೆಕ್ಟು ತರುವುದಕ್ಕೆ ಅವಕಾಶವಿದೆ ಎಂದರೆ ಅದರಿಂದ ಮುನಿಸಿಪಲ್ ಆಡಳಿತ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲ ಎಂಬುದನ್ನು ಅಧ್ಯಕ್ಷರಾದ ತಾವು ತಮ್ಮ ಅನುಭವದಲ್ಲಿ ಮನಗಂಡಿರಬಹುದು. ಏಕೆಂದರೆ ಎತ್ತು ಲಾಪ್ಸ್ ಆದ ಸಬ್ಜೆಕ್ಟು ಮುಂದಿನ ಸಭೆಯಲ್ಲಿ ಬರುತ್ತದೆ ಎಂದರೆ ಅದು ದಿನ ನಿತ್ಯದ ಮುನಿಸಿಪಾಲಿಟಿಯ ವ್ಯವಹಾರಕ್ಕೆ ಗೊಂದಲವನ್ನುಂಟು ಮಾಡುತ್ತದೆಯೇ ಹೊರತು ಅದರಿಂದ ಯಾವ ಒಂದು ಒಳ್ಳೆಯ ಪರಿಣಾಮವೂ ಆಗುವುದಿಲ್ಲ. ಆದ್ದರಿಂದ ಲ್ಯಾಪ್ಸ್ ಆದ ಸಬ್ಜೆಕ್ಟನ್ನು ಪುನಃ ತರುವುದಕ್ಕೆ ಒಂದು ಕಾಲ ಮಿತಿಯನ್ನು ಹಾಕುವುದು ಸೂಕ್ತ ಎಂಬುದನ್ನು ತಿಳಿಸಿ ಸರ್ಕಾರದವರೇ ಒಂದು ತಿದ್ದುಪಡಿಯನ್ನು ತಂದು ಸೂಕ್ತ ಬದಲಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಸೆಕ್ಷನ್ 49 ಸಬ್-ಸೆಕ್ಷನ್ 3 ರಲ್ಲಿ ಕೌನ್ಸಲರ್ ಏನಾದರೂ ಮೀಟಿಂಗ್‌ನಲ್ಲಿ ಮಿಸ್ ಬಿಹೇವ್ ಮಾಡಿದರೆ ಅಥವಾ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ಮಾಡಿದರೆ, ಸಭಾನಡವಳಿಕೆಗಳಿಗೆ ವಿರುದ್ಧವಾಗಿ ನಡೆದರೆ ಅಂಥವರನ್ನು ಹೊರಗೆ ಹಾಕುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೀರಿ. ಕಾರ್ಯತಃ ಒಂದು ವೇಳೆ ಅಧ್ಯಕ್ಷರು ರೂಲಿಂಗ್ ಕೊಟ್ಟು ಕೌನ್ಸಿಲರು ಹೊರಗೆ ಹೋಗದಿದ್ದರೆ ಉಳಿದ ಕ್ರಮ ಏನು ತೆಗೆದುಕೊಳ್ಳಬೇಕೆಂಬುದನ್ನು ಇಲ್ಲಿ ಸ್ಪಷ್ಟಪಡಿಸಿಲ್ಲ, ಇದನ್ನು ಏಕೆ ಹೇಳುತ್ತೇನೆ ಎಂದರೆ ಇದನ್ನು ತಮಗೆ ಒಂದು ಉದಾಹರಣೆಯ ಮುಖೇನ ತಮ್ಮ ಗಮನಕ್ಕೆ ತರುತ್ತೇನೆ— ಹೊಳೇನರಸೀಪುರದ ಮುನಿಸಿಪಾಲಿಟಿಯಲ್ಲಿ ಬಹುಶಃ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು, ಅಧ್ಯಕ್ಷರು ರೂಲಿಂಗ್ ಕೊಟ್ಟಾಗ ಅವರ ಮಾತಿಗೆ ಬೆಲೆ ಬರಲಿಲ್ಲ. ಹೀಗೆ ಸಭೆ ಹೊಡೆದಾಟದಲ್ಲಿ ಮುಗಿಯಿತು. ಇಂಥದಕ್ಕೆಲ್ಲ ಅವಕಾಶವಿಲ್ಲದಂತೆ ಆಕ್ಟಿನಲ್ಲಿ ಒಂದು ಸುವ್ಯವಸ್ಥಿತವಾದ ಕಲಂ ಇರಬೇಕು. ಈ ಬಿಲ್ಲನ್ನು ಮಂಡಿಸಿರುವಂಥ ಮಾನ್ಯ ಸಚಿವರಿಗೆ ಈ ವಿಚಾರಗಳಲ್ಲಿ ಹೆಚ್ಚಿನ ಅನುಭವವಿದೆ. ಆದುದರಿಂದ ಅವರು ಪ್ರತಿಯೊಂದು ವಿಚಾರವನ್ನೂ ಸ್ಪಷ್ಟವಾಗಿ ಆಕ್ಟಿನಲ್ಲಿ ಅಳಪಡಿಸಬೇಕೆಂದು ಹೇಳುತ್ತೇನೆ. ಇಂದು ನಡೆಯುತ್ತಿರುವ ಪರಿಸ್ಥಿತಿಯನ್ನು ನೋಡಿದರೆ ಈ ಮಸೂದೆಯಿಂದ ಏನೂ ಪ್ರಯೋಜನವಿಲ್ಲ. ನಮಗೆ ಪ್ರಜಾಪ್ರಭುತ್ವ ಬಂದು ಇಲ್ಲಿಗೆ 16 ವರ್ಷಗಳಾದ ನಂತರ ಸರ್ಕಾರದವರು ಇಂಥ ಒಂದು ಬಿಲ್ಲನ್ನು ತಂದಿರುವುದನ್ನು ನೋಡಿದರೆ ಇವರಿಗೆ ಈ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲವೇನೋ ಎಂದೆನಿಸುತ್ತದೆ. ಈ ಬಿಲ್ಲಿನಲ್ಲಿ ಹಿಂದೆ ಮುನಿಸಿಪಲ್ ಕೌನ್‌ಸಿಲ್ಲಿಗೂ, ಮತ್ತು ಮುನಿಸಿಪಾಲಿಟಿಯ ಅಧ್ಯಕ್ಷರಿಗೂ ಇದ್ದಂಥ ಅಧಿಕಾರವನ್ನು ಈ ದಿವಸ ಕಿತ್ತುಹಾಕಿ ಆ ಅಧಿಕಾರವನ್ನು ಸರ್ಕಾರಿ ನೌಕರರಿಗೆ ಕೊಡಲಾಗಿದೆ. ಇದನ್ನು ನೋಡಿದರೆ ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲವೆಂದು ಕಂಡುಬರುತ್ತದೆ. ಕೇವಲ ತಿಂಗಳಿಗೆ 60 ರೂಪಾಯಿಗಳ ಒಬ್ಬ ಗುಮಾಸ್ತನನ್ನು ನೇಮಿಸತಕ್ಕ ಅಧಿಕಾರ ಕೂಡ ಅಧ್ಯಕ್ಷರಿಗಿಲ್ಲ. ಒಬ್ಬ ಸಾಮಾನ್ಯ ಮುನಿಸಿಪಲ್ ನೌಕರನಿಗೆ, ಒಬ್ಬ ಜವಾನನಿಗೆ ಜುಲ್ಮಾನೆ ಹಾಕುವುದಕ್ಕೂ ಇವರಿಗೆ ಅಧಿಕಾರವಿಲ್ಲ. ಹಿಂದೆ ಇವರಿಗಿದ್ದ ಅಧಿಕಾರವನ್ನೆಲ್ಲಾ ಕಿತ್ತು ಒಬ್ಬ ಎಗ್ಸಿಕ್ಯುಟೀವ್ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಇಂಥ ಒಂದು ಬದಲಾವಣೆಯಿಂದ ಇಲ್ಲಿಯತನಕ ನಡೆಯುತ್ತಿದ್ದ ಲೋಪದೋಷಗಳು ಸರಿಹೋಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಇಂಥ ಶಾಸನಗಳನ್ನು ರಚಿಸುವುದರಿಂದ ದೇಶಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ ಮೊನ್ನೆ ಹೈಕೋರ್ಟಿನವರು

ಕೊಟ್ಟಿರುವಂಥ ಸ್ಟೇ ಆರ್ಡರನ್ನು ಡೆಪ್ಯುಟಿ ಕಮಿಷನರು ಜಾರಿಗೆ ಕೊಟ್ಟಿಲ್ಲ. ಖಾಸಗೀ ಅಧಿಕಾರಿಗಳ ಕೈಯಲ್ಲಿರಬೇಕಾದ ಅಧಿಕಾರ ಈ ದಿವಸ ಒಬ್ಬ ಸರ್ಕಾರಿ ಅಧಿಕಾರಿಯ ಕೈಗೆ ಹೋದುದರಿಂದ ಇಂಥ ತಪ್ಪುಗಳಾಗುವುದಕ್ಕೆ ಅವಕಾಶವಾಗಿದೆ. ಮೇಲಾಗಿ ಈ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳ ಮನೋಭಾವ ಹೇಗಿದೆ ಎಂಬುದೂ ಇದರಿಂದಲೇ ವೇದ್ಯವಾಗುತ್ತದೆ. ಆದುದರಿಂದ ಈ ಶಾಸನ ಜಾರಿಗೆ ಬಂದರೆ ಇದರಿಂದ ದುಷ್ಪರಿಣಾಮಗಳಾಗುತ್ತವೇ ವಿನಾ ಇದರಿಂದ ಸತ್ಪರಿಣಾಮ ಉಂಟಾಗುವುದಿಲ್ಲ. ಇಂಥ ಮಸೂದೆಗಳಿಂದ ಪ್ರಜಾಪ್ರಭುತ್ವಕ್ಕೆ ಖಂಡಿತವಾಗಿಯೂ ಧಕ್ಕೆ ಉಂಟಾಗುತ್ತದೆ. ಈ ದಿವಸ ಈ ಮಸೂದೆಯಲ್ಲಿ ಅಧ್ಯಕ್ಷರಿಗೆ ಕನಿಷ್ಠ ಒಂದು ಲೈಸೆನ್ಸ್ ಕೊಡತಕ್ಕ ಅಧಿಕಾರ ಕೂಡ ಇರುವುದಿಲ್ಲ. ಅಧ್ಯಕ್ಷರೂ ಮತ್ತು ಮುನಿಸಿಪಲ್ ಕೌನ್ಸಿಲ್‌ಗಳೆರಡೂ ಕೇವಲ ಒಂದು ಅಡ್ವೈಜರಿ ಬೋರ್ಡಿದ್ದ ಹಾಗೆ ಆಗಿದೆ. ಇಲ್ಲಿಗೆ ಪ್ರಜಾಪ್ರಭುತ್ವ ಬಂದು 16 ವರ್ಷಗಳ ನಂತರ ಇಂಥ ಒಂದು ಬಿಲ್ಲನ್ನು ತರುವುದು ನಿಜವಾಗಿಯೂ ಉಚಿತವೇ ಎಂಬುದನ್ನು ಮಾನ್ಯ ಮಂತ್ರಿಗಳೇ ಹೇಳಬೇಕು. ಇಂಥ ಬಿಲ್ಲನ್ನು ತರುವುದು ಖಂಡಿತ ಅವಮಾನಕರ.

ನಾನು ಇನ್ನು ಟ್ಯಾಕ್ಸೇಷನ್ನಿನ ಮೇಲೆರಡು ಮಾತುಗಳನ್ನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಪುಟ 17ರಲ್ಲಿ ಹೀಗೆ ಹೇಳಿದ್ದಾರೆ :—

"The Committee are of the opinion that the maximum rate of octroi on potatoes and onions may be two naye paise per ten kilograms."

ಇದು ಬಹಳ ಜಾಸ್ತಿಯಾಯಿತು. ಹಳ್ಳಿಯ ರೈತ ತಾನು ಬೆಳೆದ ಸಾಮಾನುಗಳನ್ನು ಮುನಿಸಿಪಲ್ ಏರಿಯಾಕ್ಕೆ ಮಾರಾಟ ಮಾಡಲು ತಂದರೆ ಆತನು ಅಲ್ಲಿ ಮಾರಾಟ ಮಾಡತಕ್ಕ ಸ್ಥಳಕ್ಕೆ 10 ಕೆ. ಜಿ. ಗೆ 2 ನಯಾ ಪೈಸೆಗಳನ್ನು ಕೊಡಬೇಕೆಂದು ಹೇಳಿರತಕ್ಕದ್ದು ಬಹಳ ಜಾಸ್ತಿಯಾಯಿತು. ಇದನ್ನು ಒಂದು ನಯಾಪೈಸೆಗೆ ಇಳಿಸಬೇಕೆಂದು ಹೇಳುತ್ತೇನೆ. ಇದೇ ರೀತಿ ತೆಂಗಿನಕಾಯಿ, ಕೊಬ್ಬರಿಗೂ ಟ್ಯಾಕ್ಸನ್ನು ಹಾಕಿದ್ದಾರೆ. ಇದನ್ನು ಸರ್ಕಾರದವರು ಪುನಃ ಪರಿಶೀಲನೆಮಾಡಿ ಈಗ ಹಾಕಿರತಕ್ಕ 50 ನಯಾಪೈಸೆಗಳನ್ನು ತಪ್ಪಿಸಿ ಇದನ್ನು 25 ನಯಾಪೈಸೆ ಇಳಿಸಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಹಿಂದೆ ಎಷ್ಟಿತ್ತೋ, ಅಷ್ಟನ್ನೇ ಈಗಲೂ ಇಟ್ಟಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ) :—ಅದು ಒಂದು ಸಾವಿರಕ್ಕೆ 5 ರೂಪಾಯಿ ಇರಬೇಕು. ಅದನ್ನು ತಾವು ಇನ್ನೊಮ್ಮೆ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಮೊದಲೇ ಹೇಳಿದಹಾಗೆ ಅಧ್ಯಕ್ಷರ ಬಗ್ಗೆ ಈ ಅವಿಶ್ವಾಸ ನಿರ್ಣಯದ ಗೊಂದಲವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆರಡು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ : ಈಗಾಗಲೇ ಶ್ರೀ ದೇವೇಗೌಡರು ಹೇಳಿದಹಾಗೆ ಹಿಂದೆ ಮುನಿಸಿಪಲ್ ಅಧ್ಯಕ್ಷರಿಗೂ ಮತ್ತು ಕೌನ್ಸಿಲರುಗಳಿಗೂ ಇದ್ದ ಅಧಿಕಾರವನ್ನು ಕಿತ್ತುಕೊಂಡು ಪ್ರಜಾಪ್ರಭುತ್ವಕ್ಕೆ ಮಸಿಬಳಿದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣಮಾಡುತ್ತೇವೆಂದು ಹೇಳಿ ಸರ್ಕಾರ ಎಲ್ಲ ಅಧಿಕಾರವನ್ನೂ ತನ್ನ ಕೈಲಿಟ್ಟುಕೊಂಡು ಪ್ರತಿಯೊಂದಕ್ಕೂ ನಾವು ವಿಧಾನಸೌಧಕ್ಕೆ ಬಂದು ಇವರಲ್ಲಿ ಕೈಚಾಚಬೇಕಾಗಿದೆ. ಇಂಥ ಪರಿಸ್ಥಿತಿ ಖಂಡಿತ ಬೇಡ. ಇಲ್ಲಿ ಸುಮ್ಮನೆ ನಾವು ಮಂತ್ರಿಗಳ ಭಾಷಣ ಕೇಳುತ್ತಿರುವುದಷ್ಟೇ ವಿನಾ ಕಾರ್ಯತಹಃ ನಾವು ಏನನ್ನೂ ಸಾಧನೆ ಮಾಡುತ್ತಿಲ್ಲ. ಮುನಿಸಿಪಲ್ ಅಧ್ಯಕ್ಷರೂ ಕೌನ್ಸಿಲರುಗಳೂ ಕೇವಲ ಒಂದು ಸಲಹಾಮಂಡಲಿ ಇದ್ದಹಾಗೆ. ಇವರ ಸಲಹೆಯನ್ನು ಕೇಳಿದರೆ ಕೇಳಬಹುದು, ಬಿಟ್ಟರೆ ಬಿಡಬಹುದು. ಹೀಗಾದುದರಿಂದಲೇ ಇಂದು ಕೆಲಸಗಳು ಹೀಗೆ ನಡೆಯುತ್ತಿವೆ. ಈ ಹಿಂದೆ ಸಮಗ್ರ ಮೈಸೂರು ದೇಶದ ಮುನಿಸಿಪಲ್ ಅಧ್ಯಕ್ಷರೆಲ್ಲ ಒಂದು ಸಮ್ಮೇಳನ ನಡೆಸಿ ಅಧ್ಯಕ್ಷರಿಗೂ ಕೌನ್ಸಿಲರಿಗೂ ಇದ್ದ ಅಧಿಕಾರ ಹಿಂದಿನಂತೆ ಇರಲೇಬೇಕೆಂದು ವಾದಿಸಿದ್ದಾರೆ. ಅದನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ. 50-60 ರೂಪಾಯಿಗಳ ಒಬ್ಬ ನೌಕರನನ್ನೂ ನೇಮಿಸಿಕೊಳ್ಳುವುದಕ್ಕೂ ಇವರಿಗೆ ಅಧಿಕಾರವಿರುವುದಿಲ್ಲ. ಒಬ್ಬರಿಗೆ ಜುಲ್ಮಾನೆ ಹಾಕಲು ಇವರಿಗೆ ಅಧಿಕಾರವಿಲ್ಲ. ಹೀಗಾದ ಮೇಲೆ ಅಲ್ಲಿ ನಡೆಯಬೇಕಾದ ಕೆಲಸಗಳು ಇನ್ನು ಎಷ್ಟರ ಮಟ್ಟಿಗೆ ಆಗಬಹುದೆಂಬುದನ್ನು ತಾವೇ ಲೆಕ್ಕ ಹಾಕಬಹುದು. ಆಗ ನಾವು ಮಂತ್ರಿಗಳ ಹತ್ತಿರ ಒಬ್ಬ ನೌಕರನ ವರ್ಗಾವರ್ಗಿಗೂ ಇವರ ಹತ್ತಿರ ಬಂದು ಸಲಾಮು ಹೊಡೆಯಬೇಕು. ಇಲ್ಲವಾದರೆ ಕೆಲಸಗಳು ಖಂಡಿತ ಆಗುವುದಿಲ್ಲ.

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಇನ್ನು ಹಳ್ಳಿಯಿಂದ ಬರತಕ್ಕ ರೈತರು ತನ್ನ ಸಾಮಾನಿಗೆ ಮತ್ತು ಗಾಡಿಗೆ ಆಕ್ಟ್ರಾಯಿ ಮತ್ತು ಸುಂಕಗಳನ್ನು ಕೊಡಬೇಕಾಗಿದೆ. ಗಾಡಿಯಲ್ಲಿ ತೆಂಗಿನಕಾಯಿಗಳನ್ನು ತಂದರೆ ನೂರಕ್ಕೆ ಎಂಟಾಣೆ ಟ್ಯಾಕ್ಸನ್ನೂ ಮತ್ತು ಗಾಡಿಗೆ ಎಂಟಾಣೆ ಜಕಾತಿಯನ್ನೂ ಕೊಡಬೇಕಾಗಿದೆ. ಆ ತೆಂಗಿನ ಕಾಯಿ ಗಳನ್ನು ರೆಗ್ಯುಲೇಟೆಡ್ ಮಾರ್ಕೆಟ್ ಯಾರ್ಡಿಗೆ ತೆಗೆದುಕೊಂಡು ಹೋದರೆ ಪುನಃ ಅಲ್ಲಿ ಬೇರೆ ಸುಂಕ ಕೊಡಬೇಕು. ಇದನ್ನು ನೋಡಿದರೆ ಹಳ್ಳಿಯವರು ಪುನರುದ್ಧಾರವಾಗುವುದು ಇವರಿಗೆ ಬೇಕಾಗಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಮುನಿಸಿಪಾಲಿಟಿಯವರು ಬಿಟ್ಟುಬಿಡಬೇಕೆಂದರೆ ಬಿಡಲೂ ಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇವರು ಹಳ್ಳಿಯ ರೈತನ ಮೇಲೆ ಟ್ಯಾಕ್ಸ್ ಹಾಕಿ ಆ ಹಣದಲ್ಲಿ ಅಧ್ಯಕ್ಷರ ಮನೆಯ ಮುಂದೆ ಸರ್ಕಲ್ಲಿನಲ್ಲಿ, ಲೈಟು ಇತ್ಯಾದಿಗಳನ್ನು ಹಾಕಿಸಿಕೊಂಡು, ಅಲ್ಲಿ ಒಳ್ಳೇ ರಸ್ತೆಗಳು ಇವನ್ನೆಲ್ಲಾ ಮಾಡಿಕೊಂಡು ಸುಖವಾಗಿರುತ್ತಾರೆ. ಇದರಿಂದ ಹಳ್ಳಿಯವನಿಗೆ ಬಂದ ಭಾಗ್ಯವೇನು ? ಮುನಿಸಿಪಾಲಿಟಿಗೆ ಹೆಚ್ಚಿನ ವರಮಾನ ಬೇಕಾದರೆ ಮನೆಗಂದಾಯ ಹಾಕಿ; ಪಟ್ಟಣದಲ್ಲಿರತಕ್ಕವರಿಂದ ವಸೂಲು ಮಾಡಿ, ಯಾರು ಬೇಡ ಎನ್ನುತ್ತಾರೆ ?

5-00 P.M.

ತೆಂಗಿನಕಾಯಿ ಮಾರಾಟಕ್ಕೆ ತರುವಾಗ ಸುಂಕ ಕೊಡಬೇಕು, ಗಾಡಿ ತಂದಾಗ ಸುಂಕ ಕೊಡಬೇಕು. ಹೀಗೆ ನಾನಾ ರೀತಿಯ ತೆರಿಗೆಗಳನ್ನು ಹೇರುತ್ತಿದ್ದೀರಿ. ನಿಮಗೆ ಪವರು ಇದೆ ಎಂದು, ನಿಮಗೆ ದುಡ್ಡು ಬೇಕಾಗಿದೆ ಎಂದು ಜನರ ಮೇಲೆ ಈ ರೀತಿ ಹೊರೆಯನ್ನು ಏಕೆ ಹೇರುತ್ತೀರಿ ! ಪ್ರತಿ ಯೊಂದು ಕಡೆಯಲ್ಲೂ ತೆರಿಗೆ ಕೊಡಬೇಕು. ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ರೈತರು ಹೋದರೆ ಅಲ್ಲಿ ಸೇಲ್ಸ್ ಟ್ಯಾಕ್ಸು ಇನ್ನಿತರ ಟ್ಯಾಕ್ಸುಗಳನ್ನು ಕೊಡಬೇಕು. ಹೀಗೆ ಪ್ರತಿಯೊಂದು ಕಡೆಯೂ ಡಬ್ಬಲ್ ಟ್ಯಾಕ್ಸು ಬೀಳುತ್ತದೆ. ಮನೆಗಂದಾಯ ಹಾಕುತ್ತಾರೆ; ಎಜುಕೇಷನ್ನು ಸೆಸ್ಸು ಎಂದು ಬೇರೆ ಹಾಕುತ್ತಾರೆ. ಇದೇನೋ ಹೋಗಲಿ ಎಂದರೆ ತೆಂಗಿನಕಾಯಿ ಗಾಡಿಗೆ ಒಂದು ಕಡೆ ಎಂಟಾಣೆ, ಇನ್ನೊಂದುಕಡೆ 15 ರೂಪಾಯಿ ಎಂದು ಬೇರೆ ಹಾಕುತ್ತಾರೆ. ನಮ್ಮ ಮಾನ್ಯ ಮಂತ್ರಿಗಳು ರೈತ ರಾಗಿದ್ದು ಅನುಭವಪಡೆದಿರುವವರೇ ಬಂದಿದ್ದಾರೆ ಎಂದು ತಿಳಿದಿದ್ದರೆ ಈಗ ಈ ರೀತಿ ಮಾಡುವುದನ್ನು ನೋಡಿದರೆ ಇದು ಯಾವ ರೀತಿಯ ರೈತರಗಿರಿ ಎಂದು ನಾನು ಕೇಳುತ್ತೇನೆ. ಆದುದರಿಂದ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಂಡು ಸಾಮಾನ್ಯವಾದ ಆಹಾರ ಪದಾರ್ಥಗಳ ಮೇಲೆ ಸುಂಕ ಹಾಕುವುದನ್ನು ಕೈಬಿಡಬೇಕೆಂದು ಸಲಹೆ ಮಾಡುತ್ತೇನೆ.

† ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ತಂದಿರತಕ್ಕ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ನಗರ ಮತ್ತು ಪೌರಸಂಸ್ಥೆಗಳ ಆಡಳಿತಕ್ಕೆ ಅನ್ವಯಿಸುವಂತಹ ಕಾಯಿದೆ ಯನ್ನು ಈ ಹಿಂದೆಯೂ ನಮ್ಮ ಮುಂದೆ ಇಟ್ಟಿದ್ದರು. ಆಗ ಚರ್ಚೆಮಾಡಿ ಸೆಲೆಕ್ಟು ಕಮಿಟಿಗೆ ಕಳುಹಿಸ ಲಾಗಿತ್ತು. ಜಾಯಿಂಟ್ ಸೆಲೆಕ್ಟು ಕಮಿಟಿಯವರೂ ಇವುಗಳಲ್ಲಿರುವ ಅನೇಕ ವಿಷಯಗಳನ್ನು ಕೂಲಂ ಕಷವಾಗಿ ಚರ್ಚೆಮಾಡಿ ಮಹತ್ವವಾದ ವಿಚಾರಗಳನ್ನು ಇದರಲ್ಲಿನ ಅನೇಕ ಸೆಕ್ಷನ್ನುಗಳಲ್ಲಿ ಅಡಕಮಾಡಿ ದ್ದರೂ ಇನ್ನೂ ಕೆಲವಾರು ಸೆಕ್ಷನ್ನುಗಳಲ್ಲಿ ಕೆಲವು ಸೂಚನೆಗಳನ್ನು ಅಡಕಮಾಡಲು ನಾನಿಲ್ಲಿ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ಇತರ ರಾಜ್ಯಗಳ ಕೆಲವು ಭಾಗಗಳು ಈ ರಾಜ್ಯಕ್ಕೆ ಸೇರಿ ಕರ್ನಾಟಕ ರಾಜ್ಯವಾಗಿರುವುದರಿಂದ ಆ ಭಾಗಗಳಲ್ಲಿ ಕಾಯಿದೆಗಳನ್ನೆಲ್ಲಾ ಒಂದುಗೂಡಿಸಿ ಈ ಒಂದು ಕಾಯದೆಯನ್ನು ಇಲ್ಲಿ ತರಲಾಗಿದೆ. ಕೆಲವು ಸದಸ್ಯರು ಈಗಾಗಲೇ ಕೆಲವಾರು ವಿಷಯ ಗಳು ಇದರಲ್ಲಿಲ್ಲ ಎಂದು ಹೇಳಿದ್ದಾರೆ. ಅಂತಹ ಕೆಲವಾರು ವಿಷಯಗಳ ಬಗ್ಗೆ ಸರಿಯಾದ ತಿದ್ದುಪಡಿ ತರುವುದು ಅವಶ್ಯಕ ಎಂದು ನನಗೆ ಕಂಡುಬರುತ್ತದೆ.

ಸೆಕ್ಷನ್ನು 42ರಲ್ಲಿ ಟೌನು ಮುನಿಸಿಪಾಲಿಟಿಗಳಲ್ಲಿ ಪ್ರೆಸಿಡೆಂಟು ಹಾಗೂ ವೈಸ್ ಪ್ರೆಸಿಡೆಂಟುಗಳ ಬಗ್ಗೆ ಹೇಳಲಾಗಿದೆ. ಹಾಗೂ ಸೆಕ್ಷನ್ನು 42 (4)ರಲ್ಲಿ ಹೇಳಿರುವುದನ್ನು ನೋಡಿದರೆ ಇದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾಗುತ್ತದೆ. ಇದನ್ನು ಸ್ವಲ್ಪ ಪರಿಶೀಲಿಸಬೇಕೆಂದು ತೋರುತ್ತದೆ.

Section 46 ರಲ್ಲಿ Penalty for Refusal to land over charge to New President or Vice-President ಎಂದಿದೆ. ಇದರಲ್ಲಿರುವಂತಹ ಸಂದರ್ಭ ಬಂದಾಗ ಯಾರಾದರೂ ಇಂತಹ ಪ್ರೆಸಿಡೆಂಟರು ತಮ್ಮ ಚಾರ್ಜನ್ನು ಇನ್ನೊಬ್ಬರಿಗೆ ಕೊಡದೇ ಹೋದರೆ ಅವರಿಗೆ ಶಿಕ್ಷೆ ಮಾಡುವುದು ಎಂದರೆ ಇದು ಪ್ರಜಾಪ್ರಭುತ್ವದಲ್ಲಿ ಸರಿಯಾಗಿರುವುದಿಲ್ಲ. ಈ ರೀತಿ ಶಿಕ್ಷೆ ಕೊಡು ವುದಕ್ಕೆ ಬದಲು ಜುರ್ಮಾನೆ ಕೊಡುವಂತೆ ತಿದ್ದುಪಡಿಮಾಡಿದರೆ ಒಳಿತು ಎಂದು ಕಾಣುತ್ತದೆ.

ಸೆಕ್ಷನ್ನು 56ರಲ್ಲಿ ಅಡ್ಜರ್ನ್ಡ್ ಮೀಟಿಂಗುಗಳಲ್ಲಿ ಯಾವುದೇ ತರಹದ ಕೋರಂ ಇಲ್ಲದೆ ಮುಂದೂಡಿ ದಾಗ ಮತ್ತು ಎರಡನೇ ಬಾರಿಗೆ ಸೇರಿದಾಗಲೂ ಅಲ್ಲಿ ಕಾಲು ಭಾಗದಷ್ಟು ಸದಸ್ಯರಿದ್ದರೂ ಅಲ್ಲಿ ಯಾವುದಾದರೂ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎನ್ನುವಂತೆ ಸ್ವಲ್ಪ ತಿದ್ದುಪಡಿ ಮಾಡುವುದು ಉತ್ತಮ.

ಇನ್ನು ಚಾಪ್ಟರು (5) ರಲ್ಲಿನ 87 ರಿಂದ 91ನೇ ಸೆಕ್ಷನ್ನುಗಳಲ್ಲಿ discretionary and obligatory functionsಗಳ ಬಗ್ಗೆ ಹೇಳಲಾಗಿದೆ. ನಮ್ಮ ನಗರ ಸಂಸ್ಥೆ ಮತ್ತು ಬೇರೆ ಸಂಸ್ಥೆ ಗಳಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ವಿಚಾರಮಾಡಿ ನೋಡಿದರೆ ಈ ಸಂಸ್ಥೆಗಳ ಹಣ ಕಾಸಿನ ಶಕ್ತಿಯಿಂದ ಇಷ್ಟು ಕಾರ್ಯಕಲಾಪಗಳನ್ನು ಮಾಡಲು ಸಾಧ್ಯವಿರಲಿಕ್ಕಿಲ್ಲ ಎಂದು ನನ್ನ ಭಾವನೆ. ಇದರ ಬಗ್ಗೆ ಮಾನ್ಯ ಸದಸ್ಯರನೇಕರು ಟೀಕೆಮಾಡಿದ್ದಾರೆ. ನಗರ ಸಂಸ್ಥೆಗಳು ಕೆಲವು ಟಾಕ್ಸುಗಳ ಮೂಲಕ ಎಂದರೆ ಮನೆಕಂದಾಯ ಮತ್ತು ಪ್ರೊಫೆಷನ್ನು ಟ್ಯಾಕ್ಸ್ ಇತ್ಯಾದಿಗಳನ್ನು ಹಾಕಿ ಹಣಕಾಸು ಉತ್ಪತ್ತಿಯನ್ನು ಮಾಡಿಕೊಳ್ಳಲು ಸಾಧ್ಯವಿದೆ. ಇದಲ್ಲದೆ, ವಾಟರು ಟ್ಯಾಕ್ಸು ಎಲೆಕ್ಟ್ರಿಸಿಟಿ ಟ್ಯಾಕ್ಸು ಹಾಕಿ ನಗರಗಳಿಗೆ ಸೌಕರ್ಯಗಳನ್ನು ಒದಗಿಸಿ ಕೊಡಲು ಅನುಕೂಲವಾಗುತ್ತದೆ. ಇಂತಹ ಟಾಕ್ಸುಗಳನ್ನೆಲ್ಲಾ ಮುನಿಸಿಪಾಲಿಟಿಗಳು ಹಾಕಲಿಕ್ಕೆ ಬರುತ್ತದೆ. ಅಲ್ಲದೆ ರಾಜ್ಯ ಸರಕಾರ ದಿಂದ ಕೂಡ ತಾಲ್ಲೂಕು ಬೋರ್ಡಿಗೆ ಮತ್ತು ಪಂಚಾಯಿತಿಗಳಿಗೆ ಒಂದು ಷೇರು ಸಿಕ್ಕುತ್ತದೆ. ಹಾಗೆಯೇ ನಗರ ಸಮಿತಿಗಳಿಗೂ ಮತ್ತು ಇತರ ಸಂಸ್ಥೆಗಳಿಗೂ ಇಂತಿಷ್ಟು ಭಾಗ ಎಂದು ಕೊಟ್ಟರೆ ಅನುಕೂಲವಾಗುತ್ತದೆ.

ಸೇಲ್ಸ್ ಟ್ಯಾಕ್ಸಿನಂಥ ಬಾಬಿನಲ್ಲಿ ಹೆಚ್ಚು ಆದಾಯ ಬರತಕ್ಕಂಥಾದ್ದು ಸ್ವಾಭಾವಿಕ. ಅಂಥ ಒಂದು ಪ್ರಸಂಗದಲ್ಲಿ, ಆ ಉತ್ಪತ್ತಿಯ ಇಂತಿಷ್ಟು ಪರ್ಸೆಂಟೇಜನ್ನು ಸರ್ಕಾರ ನಗರ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು ಎಂದು ಕಾನೂನು ಮಾಡಿ, ಅದಕ್ಕಾಗಿಯೇ ಒಂದು ಪ್ರತ್ಯೇಕ ಚಾಪ್ಟರ್ ಸೇರಿಸಿ, ಅದರಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಬೇಕು. ಹೀಗೆ ಈ ಮಸೂದೆಯಲ್ಲಿ ಪ್ರತ್ಯೇಕವಾಗಿ ಒಂದು ಕಾಯಿದೆಯನ್ನು ಮಾಡಿದ್ದೆ ಆದರೆ ನಗರ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗಿ ಜನರಿಗೆ ಹೆಚ್ಚು ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕಂಥ ಯೋಗ್ಯತೆ ಬರುತ್ತದೆಂಬ ಬಗ್ಗೆ ಸರ್ಕಾರದ ಗಮನ ವನ್ನು ಸೆಳೆಯುತ್ತೇನೆ.

ಅದೂ ಅಲ್ಲವೆ ಮುಖ್ಯವಾಗಿ ಈ ಒಂದು ಜಾಯಿಂಟ್ ಸಲೆಕ್ಟ್ ಕಮಿಟಿ ರಿಪೋರ್ಟ್ ನಮ್ಮ ಮುಂದೆ ಏನಿದೆ; ಅದನ್ನು ಮಸೂದೆಯನ್ನು ಕೂಲಂಕಷವಾಗಿ ಪರಿಶಿಲಿಸಿ ತಯಾರಿಸಿದ್ದಾರೆ ಮತ್ತು ನಗರಾಳಿಡತಕ್ಕೆ ಮತ್ತು ನಮ್ಮ ರಾಜ್ಯಕ್ಕೆ ಇಂಥ ಸಮನ್ವಯ ಕಾಯಿದೆ ಬಹಳ ಮುಖ್ಯವಾದುದು. ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರೆಕಮೆಂಡೇಷನ್ಸ್ ಸಹಿತ ನಮ್ಮ ಮುಂದಿರುವ ಮುನಿಸಿಪಾಲಿಟೀಸ್ ಮಸೂದೆಗೆ ನನ್ನ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿ, ನಾನು ನನ್ನ ಮಾತನ್ನು ಮುಗಿಸು ತ್ತೇನೆ.

† ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಮಂಡಿಸಿ ರುವ ಈ ಮುನಿಸಿಪಾಲಿಟೀಸ್ ಬಿಲ್ಲನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಇದುವರೆಗ ಈ ರಾಜ್ಯದಲ್ಲಿ 5-6 ಬಗೆಯ ಕಾನೂನುಗಳು ಪೌರಸಭೆಗೆ ಸಂಬಂಧಪಟ್ಟಂತೆ ರೂಢಿಯಲ್ಲಿದ್ದವು. ಅವುಗಳನ್ನು ಸರಿಪಡಿಸಿ ಈ ವಿಶಾಲ ರಾಜ್ಯಕ್ಕೆ ಒಂದೇ ರೀತಿಯ ಕಾನೂನು ತರ ಬೇಕೆಂದು ನಮ್ಮ ಮುಂದೆ ಈ ಮಸೂದೆಯನ್ನು ಮಂಡಿಸಿರತಕ್ಕಂಥಾದ್ದು ತುಂಬ ಅಭಿನಂದನೀಯ. ಈ ಸೆಲೆಕ್ಟ್ ಕಮಿಟಿಯವರು ಸಾಧಾರಣವಾಗಿ ಮುನಿಸಿಪಾಲಿಟಿಗಳಲ್ಲಿ ಬರತಕ್ಕಂಥ ಸರ್ವ ಎಡರು ತೊಡರುಗಳನ್ನೂ ಚೆನ್ನಾಗಿ ವಿವೇಚನೆ ಮಾಡಿದ್ದಾರೆ. ಈ ಕಾನೂನಿನಲ್ಲಿ ಒಳ್ಳೆಯ ಕ್ಲಾಜುಗಳನ್ನು ಅಳವಡಿಸುವುದೇ ಅಲ್ಲದೇ ಅವುಗಳಿಗಳಿಗೆ ಸಂಬಂಧ ಪಟ್ಟಂತೆ ರೂಲುಗಳನ್ನು ಸಹ ಈ ಕಾಯಿದೆಯ ನಿಬಂಧದಲ್ಲಿ ಕೊಟ್ಟಿದ್ದಾರೆ. ಇದು ಹೊಸದಾಗಿ ಮುನಿಸಿಪಲ್ ಸದಸ್ಯರಾಗಂಥವರಿಗೆ, ಮುನಿಸಿ ಪಲ್ ಅಧ್ಯಕ್ಷರಾಗುವಂಥ ಮೊದಲಾದವರಿಗೆ ಒಂದು ರೀತಿಯ ಗೈಡ್ ಇದ್ದ ಹಾಗಿದೆ ಎಂದು ನಾನು ಹೇಳುತ್ತೇನೆ.

ಚುನಾವಣೆ ನಾಲ್ಕು ವರ್ಷಕ್ಕೊಮ್ಮೆ ಆಗತಕ್ಕಂಥಾದ್ದು ಎಂದು ನಿಗದಿ ಮಾಡಿದ್ದಾರೆ. ಆದರೆ ಅಧ್ಯಕ್ಷರನ್ನು ಮಾತ್ರ ವರ್ಷಕ್ಕೆ ಒಬ್ಬೊಬ್ಬರಂತೆ ಬದಲಾವಣೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ವರ್ಷಕ್ಕೆ ಒಬ್ಬೊಬ್ಬರನ್ನು ಅಧ್ಯಕ್ಷರಾಗಿ ಮಾಡುವುದಾದರೆ ಮುನಿಸಿಪಾಲಿಟಿಯಲ್ಲಿ ಸಾಕಾದಷ್ಟು ದಕ್ಷತೆಯಿಂದ ಆಡಳಿತ ನಡೆಯುವುದಿಲ್ಲವೆಂದು ನಾನು ಭಾವಿಸುತ್ತೇನೆ. ಹೊಸದಾಗಿ ಬಂದ ಒಂದೆ ರಡು ತಿಂಗಳಕಾಲ ಮುನಿಸಿಪಲ್ ವಿಷಯವನ್ನೂ ಕಾನೂನು ವಿಷಯವನ್ನೂ, ಪುರಕ್ಕೆ ಬೇಕಾದಂಥ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಕಾಲ ಕಳೆದು ಹೋಗುತ್ತದೆ; ಇನ್ನೇನು ದಕ್ಷತೆಯಿಂದ ಕಾರ್ಯ ನಿರ್ವಹಿಸಬಹುದೆಂದು ವಿಶ್ವಾಸ ಬರುವುದರೊಳಗೆ, ಒಂದು ವರ್ಷ ಕಳೆದು, ಹೊಸದಾಗಿ

(ಶ್ರೀ ಆರ್. ಮುನಿಸ್ವಾಮಯ್ಯ)

ಬರುವ ಅಧ್ಯಕ್ಷರಿಗೆ ಸ್ಥಾನ ಬಿಟ್ಟು ಕೊಡುವ ಪ್ರಕರಣವಿರುತ್ತದೆ. ಇದರಿಂದ ಅಧ್ಯಕ್ಷರುಗಳಿಗೆ ಇರುವ ಆಸಕ್ತಿ ಹೋಗಿ, ಮುನಿಸಿಪಲ್ ಕೆಲಸ ಸರಿಯಾಗಿ ನಡೆಯದೆ, ನಿಂತು ಹೋಗುತ್ತದೆ. ಅಧ್ಯಕ್ಷರ ಬದಲಾವಣೆಯನ್ನು ಎರಡು ವರ್ಷಕ್ಕೊಮ್ಮೆ ಯಾವುದೂ ಮಾಡಿದರೆ ಅನುಕೂಲವಾಗುತ್ತದೆ.

ಎಕ್ಸಿಕ್ಯೂಟೀವ್ ಆಫೀಸರನ್ನು ಪೌರಸಭೆಯವರು ಹೆಚ್ಚಿನ ಬಹುಮತ ಬಂದರೆ ವರ್ಗ ಮಾಡು ವುದಕ್ಕೆ ಅನುಕೂಲವಾಗತಕ್ಕಂಥ ಒಂದು ಪ್ರಾವಿಶನ್ ಇದೆ. ಹಾಗಾದರೆ ಆಫೀಸರಗಳೂ ಮತ್ತು ನೌಕರರುಗಳೂ ಚುನಾವಣೆ ವಿಷಯದಲ್ಲಿ ಅಥವಾ ಮತ್ತಿತರ ವಿಷಯಗಳಲ್ಲಿ ಕೈಹಾಕುವುದಕ್ಕೆ ಅವ ಕಾಶ ಬರುತ್ತದೆ. ಏಕೆಂದರೆ ಕನಕಪುರ ಪೌರಸಭೆಯಲ್ಲಿರತಕ್ಕಂಥ ಒಬ್ಬ ಎಕ್ಸಿಕ್ಯೂಟೀವ್ ಆಫೀಸರ ವಿಷಯದಲ್ಲಿ ಆ ಊರಿನ ಮುನಿಸಿಪಲ್ ಕೌನ್ಸಿಲ್ಲಿನ ಬಹಳ ಸದಸ್ಯರಿಗೆ ಒಳ್ಳೆಯ ಅಭಿಪ್ರಾಯವಿಲ್ಲದೆ ಹೋದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡಬೇಕೆಂಬ ಠರಾವು ತರುವುದಾದರೆ, ಅವರನ್ನು ಬೇರೆ ಕಡೆಗೆ ವರ್ಗ ಮಾಡಬಹುದು. ಅವರನ್ನು ಹೊಸಕೋಟೆಗೆ ವರ್ಗ ಮಾಡಬಹುದೆಂದು ಊಹಿಸೋಣ. ಹೊಸಕೋಟೆ ಪೌರಸಭೆಗೂ ಮೂರು-ಎರಡನೆಯ ಬಹುಮತದಿಂದ ಆ ಆಫೀಸರು ಬೇಡವೆಂದು ಕಂಡು ಬಂದು ಒಂದು ಠರಾವು ಮಾಡಿದರೆ, ಆ ಆಫೀಸರ ಹಣೆ ಬರಹ ಏನು ? ಸರಕಾರ ಇದನ್ನು ಬಹಳ ಚೆನ್ನಾಗಿ ಆಲೋಚನೆ ಮಾಡಬೇಕು. ಇದು ಮುಂದೆ ಒಂದು ದೊಡ್ಡ ಸಮಸ್ಯೆಯಾಗಿಯೇ ಪರಿಣಮಿಸಬಹುದು. ಪೌರ-ಸಭೆಗಳಿಗೆ ವರ್ಗ ಮಾಡುವ ಅಧಿಕಾರವಿರಬಾರದು ಇಂಥ ವರ್ಗಗಳನ್ನು ಸರ್ಕಾರದವರು ತಮ್ಮ ಅಧೀನದಲ್ಲಿಯೇ ಇಟ್ಟುಕೊಂಡಿರಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಚುನಾವಣೆ ಕಾಲದಲ್ಲಿ ಟೆರಿಟೋರಿಯಲ್ ಭಾಗಗಳನ್ನು ಮಾಡಿ, 3-4-5 ಹೀಗೆ ಸದಸ್ಯರು ಗಳನ್ನು ಒಂದು ಗೂಡಿಸಿ, ಚುನಾವಣೆ ಮಾಡುವಂಥ ಒಂದು ಕಾನೂನನ್ನು ಅಳವಡಿಸಿದೆ. ಇದು ಬಹಳ ಅನುಕೂಲವಾದದು. ಹೀಗೆ ಮಾಡದೆ, ಒಬ್ಬೊಬ್ಬರೆ ಸದಸ್ಯರಿದ್ದರೆ ಚುನಾವಣೆ ಕಾಲದಲ್ಲಿ ಯಾರಾದರೂ ಓಟನ್ನು ಕೊಂಡುಕೊಂಡು ಚುನಾಯಿತರಾಗಬಹುದು, ಶಕ್ತಿವಂತರೂ ಮತ್ತು ನೀತಿ ಯುತರನ್ನು ಸೋಲಿಸಿ ಚುನಾವಣೆಯಲ್ಲಿ ಗೆದ್ದು ಬರಬಹುದು. ಅಂಥ ಪದ್ಧತಿಯನ್ನು ತಪ್ಪಿಸುವುದಕ್ಕೋಸ್ಕರ ಇಂಥ ವಿಭಾಗ (ಡಿವಿಜನ್) ಮಾಡಿ, 3-4 ಜನರನ್ನು ಚುನಾವಣೆ ಮಾಡ ತಕ್ಕಂಥದ್ದು ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ. ಆ ವಿಭಾಗದಲ್ಲಿ ಯಾರೋ ಒಬ್ಬರ ಪ್ರಭಾವ ಹೆಚ್ಚಾಗಿದ್ದರೆ, 2-3 ಜನ ಅವರ ಕಡೆಯವರೇ ಚುನಾಯಿತರಾಗುವ ಸಂಭವವಿದೆಯೆಂದು ಹೇಳಿದರು. ಅಂಥ ಪ್ರಭಾವ ಶಾಲಿಯಾದ ವ್ಯಕ್ತಿ ಒಂದು ಟೆರಿಟೋರಿಯಲ್ ಡಿವಿಜನ್ನಿನಲ್ಲಿದ್ದು ಅವನ ಕಡೆಯವರೇ ಚುನಾವಣೆಯಲ್ಲಿ ಗೆದ್ದು ಬಂದರೆ ಅವರು ಯೋಗ್ಯರೇ ಎಂದು ಯೋಚಿಸುವುದ ರಲ್ಲಿ ತಪ್ಪಿಲ್ಲ.

ಬೈಲಾಗಳನ್ನು ಈ ಕಾನೂನಿನಲ್ಲಿ ಅಳವಡಿಸಿಕೊಂಡಿದ್ದಾರೆ. ಟೌನ್ ಮುನಿಸಿಪಾಲಿಟಿಗಳು, ಮೈನರ್ ಮುನಿಸಿಪಾಲಿಟಿಗಳು, ಮೇಜರ್ ಮುನಿಸಿಪಾಲಿಟಿಗಳು, ಕೆಲವು ಕಾನೂನುಗಳನ್ನು ಮಾಡಿ ಕೊಂಡಿದ್ದವು. ಆದರೆ ಅವುಗಳಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಅನುಕೂಲಗಳೂ ಇರಲಿಲ್ಲ. ಇಲ್ಲಿ ಕೊಟ್ಟಿರುವ ಬೈಲಾಗಳನ್ನು ಆಯಾ ಸ್ಥಳಕ್ಕೆ ತಕ್ಕಂತೆ ಪೌರಸಭೆಗಳು ಅಳವಡಿಸಿಕೊಂಡು ಸರಿ ಯಾದ ಬೈಲಾವನ್ನು ಮಾಡಿಕೊಳ್ಳಲು ಅವಕಾಶವಾಯಿತು. ಮಾದರಿ ಬೈಲಾವನ್ನು ಕಾನೂನಿ ನಲ್ಲಿಯೇ ಸೇರಿಸಿದ್ದಕ್ಕಾಗಿ ಮಾನ್ಯ ಮಂತ್ರಿಗಳನ್ನು ವಂದಿಸುತ್ತೇನೆ.

ಒಬ್ಬ ಸದಸ್ಯರು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಮುನಿಸಿಪಲ್ ಕೌನ್ಸಿಲ್ಲಿ ನಲ್ಲಿ ಮೀಸಲಾಗಿಟ್ಟಿರುವ ಸ್ಥಾನವನ್ನು ಕುರಿತು ಮಾತನಾಡುತ್ತಾ, ರಾಜ್ಯಾಂಗದಲ್ಲಿ ಸಹ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟಿಗೆ ಬೇರೆ ಬೇರೆ ರಿಸರ್ವೇಶನ್ ಮಾಡಿದ್ದಾರೆ, ಇಲ್ಲಿಯೂ ಅವ ರನ್ನು ಒಂದು ಗೂಡಿಸುವ ಬದಲು, ಅವರಿಗೆ ಬೇರೆ ಬೇರೆ ರಿಸರ್ವೇಶನ್ ಇಡಬೇಕು ಎಂದು ಒತ್ತಾಯ ಪೂರ್ವಕವಾಗಿ ಸಲಹೆ ಮಾಡಿದರು. ಷೆಡ್ಯೂಲ್ಡ್ ಕ್ಯಾಸ್ಟ್ ಜನಗಳಿಗೆ ಇರತಕ್ಕಂಥ ಅನಾನುಕೂಲತೆ, ಅರ್ಹತೆಗೆ ತಕ್ಕಂತೆ, ಅನುಕೂಲತೆಗಳು ಒದಗಬೇಕಾಗಿವೆ. ಷೆಡ್ಯೂಲ್ಡ್ ಟ್ರೈಬ್‌ಗಳ ವಿಷಯ ಬೇರೆ ಅವರ ಪ್ರತಿನಿಧಿಗಳು ಅವರಿಗೆ ಬೇಕಾದಂಥ ಅನುಕೂಲಗಳಿಗಾಗಿ ಶ್ರಮಿಸಬೇಕು. ಅದಕ್ಕೋಸ್ಕರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬುಗಳಿಗೆ ಬೇರೆ ಬೇರೆ ಸ್ಥಾನಗಳನ್ನು ಮೀಸಲಾಗಿಡ ಬೇಕೆಂದು ನಾನು ಹೇಳುತ್ತೇನೆ.

ಮಹಿಳೆಯರಿಗೆ ಒಂದೇ ಒಂದು ಮೀಸಲು ಸ್ಥಾನವನ್ನು ಕಲ್ಪಿಸಿದ್ದೀರಿ. ಅದು ಸಾಲದು. ಕನಿಷ್ಠಪಕ್ಷ ಒಂದು ಮುನಿಸಿಪಾಲಿಟಿಯಲ್ಲಿ 5 ಮಂದಿ ಮಹಿಳೆಯರಾದರೂ ಇರಬೇಕು ಎಂದು

ನಾನು ಹೇಳುತ್ತೇನೆ. ಮಹಿಳೆಯರು ಪುರಸಭೆಗಳಲ್ಲಿ, ಗ್ರಾಮ ಸಭೆಗಳಲ್ಲಿ ಹೆಚ್ಚು ಹೆಚ್ಚಿದಂತೆಲ್ಲಾ, ಅಲ್ಲಿಯ ಕೆಲಸ ಕಾರ್ಯಗಳು ಬಹಳ ಸಮಾಧಾನವಾಗಿ ನಡೆಯುತ್ತವೆ ಮತ್ತು ವೇಗವಾಗಿಯೂ ನಡೆಯುತ್ತವೆ ಎಂದ ನಾನು ಭಾವಿಸುತ್ತೇನೆ.

ಸರ್ಕಾರದವರು ಕೆಲವು ಕಾರ್ಯಗಳನ್ನು ಕೆಲವು ಕಾರ್ಯರಂಗದಲ್ಲಿ ತಮ್ಮ ಅಧೀನದಲ್ಲಿ ಇಟ್ಟು ಕೊಂಡಿರುವುದಕ್ಕೆ ಕೆಲವು ಸದಸ್ಯರು ಆಪಾದನೆ ಹೊರಿಸಿದರು. ಕೆಲವು ಕಾರ್ಯಗಳನ್ನು ಸರ್ಕಾರದ ಯೋಜನೆಯಲ್ಲಿ ಸರ್ಕಾರದ ಆಶ್ರಯದಲ್ಲಿ ನಡೆಯಬೇಕಾದ್ದು ಅಗತ್ಯ. ಚುನಾವಣೆಯಲ್ಲಿ ಬರ ತಕ್ಕಂಥ ಸದಸ್ಯರಿಗೆ ಚುನಾವಣೆಯಾಗತಕ್ಕಂಥ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಬಹಳ ಮಟ್ಟಿಗೆ ಆಯಾ ಕಾರ್ಯರಂಗದಲ್ಲಿ ಉತ್ಸಾಹವಿದ್ದರೂ ಸಹ ಅನುಭವ ಕಡಮೆ ಇರುತ್ತದೆ; ಕಾನೂನು ತಿಳುವಳಿಕೆ ಕಡಿಮೆ ಇರುತ್ತದೆ; ಆದ್ದರಿಂದ ಕೆಲಸ ಕಾರ್ಯಗಳಲ್ಲಿ ದಕ್ಷತೆ ಕಡಮೆಯಾಗಬಹುದು. ಆದ್ದರಿಂದ ಅಂಥ ಕಡೆಯಲ್ಲಿ ಸರ್ಕಾರ ನಿಯಮಿತ ಅಧಿಕಾರಿಗಳ ಮೂಲಕ ನಡೆಸುವ ಕೆಲಸ ಕಾರ್ಯಗಳು ಬಹಳವಿವೆ.

ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ಜಾಯಿಂಟ್ ಸೆಲೆಕ್ಟ್ ಸಮಿತಿಯಿಂದ ಬಂದಿರುವ ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ಈ ಮಸೂದೆಯ ಮೇಲೆ ಮಾತನಾಡುತ್ತಾ ನನ್ನ ಸ್ನೇಹಿತರು ಅನೇಕ ಲೋಪದೋಷಗಳನ್ನು ಎತ್ತಿ ಹಿಡಿದು ಅವನ್ನೆಲ್ಲ ಸರಿದೂಗಿಸಬೇಕು ಮತ್ತು ಕೆಲವೊಂದು ವಿಚಾರಗಳಲ್ಲಿ ಜನಗಳಿಗೆ ಅನುಕೂಲವಾಗತಕ್ಕ ಹಾಗೆ ಮಾರ್ಪಾಟು ಮಾಡಬೇಕು ಎಂದು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಸಂತೋಷದ ವಿಚಾರವೆಂದರೆ ಎಲ್ಲ ಮುನಿಸಿಪಾಲಿಟಿಗಳಿಗೂ ಅನ್ವಯಿಸುವಂತೆ ಒಂದು ಸಮಗ್ರವಾದ ಕಾನೂನನ್ನು ತಂದಿರುವುದು.

ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಬಹಳ ವಿಷಾದದಿಂದ ಒಂದು ವಿಷಯವನ್ನು ತರಬೇಕಾಗುತ್ತದೆ. ಮುನಿಸಿಪಾಲಿಟಿಗಳಲ್ಲಿರುವ scavengers and sweepers ಇವರನ್ನು ಬಹಳ ಅಲಕ್ಷ್ಯ ಮಾಡಿದ್ದಾರೆ. ಸಾಮಾನ್ಯವಾಗಿ ಒಂದು ನಗರವನ್ನು ಅಥವಾ ಪಟ್ಟಣವನ್ನು ಚೊಕ್ಕಟವಾಗಿಡಬೇಕಾದರೆ ಬೀದಿ ಗುಡಿಸುವುದು ಮೊಟ್ಟ ಮೊದಲನೆಯ ಕರ್ತವ್ಯ. ಆ ಜನರಿಗೆ ಈ ಕಾನೂನಿನಲ್ಲಿ ಯಾವರೀತಿಯ ಅನುಕೂಲವನ್ನೂ ಮಾಡಿಲ್ಲ. 91ನೆಯ ಕ್ಲಾಜಿನಲ್ಲಿ (ಇ) ನಲ್ಲಿ ಹೀಗೆ ಹೇಳಿದ್ದಾರೆ.

> "91 (e) providing accommodation for any class of servants other than sweepers and scavengers employed by the municipal council or granting loans to such servants for construction of houses, subject to the rules prescribed in this behalf ;"

ಈ ರೀತಿ ಬೀದಿ ಗುಡಿಸಿ ಊರನ್ನು ಚೊಕ್ಕಟವಾಗಿಡುವಂಥ ಜನರನ್ನು ಅಲಕ್ಷ್ಯ ಮಾಡಿರುವುದು ಒಳ್ಳೆಯದಲ್ಲ. ಆದುದರಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುವ ಇತರ ನೌಕರರಿಗೆ ಒದಗಿಸುವಂತೆಯೇ ಈ ಜನರಿಗೂ ಮನೆಗಳನ್ನು ಒದಗಿಸಿ ಕೊಡಬೇಕು.

ಈ ಕಾನೂನಿನಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಚೀಫ್ ಆಫೀಸರುಗಳಿಗೆ ವಿಶೇಷವಾದ ಆರ್ಬಿಟ್ರರಿ ಪವರ್ಸ್ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಜನಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅಧಿಕಾರವನ್ನು ವಿಕೇಂದ್ರೀಕರಿಸಬೇಕು, ಜನಗಳಿಗೇ ಅಧಿಕಾರವನ್ನು ಕೊಡಬೇಕು, ಅವರೇ ಆಡಳಿತವನ್ನು ನಡೆಸಬೇಕು ಎನ್ನುವ ಕಾಲದಲ್ಲಿ ಜಿಲ್ಲಾಧಿಕಾರಿಗಳಿಗೆ ಇಷ್ಟರಮಟ್ಟಿನ ತೀವ್ರವಾದ ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುವುದು ಬಹಳ ವಿಷಾದಕರವಾದುದು. ಸಂಬಂಧಪಟ್ಟ ಮುನಿಸಿಪಾಲಿಟಿಯವರನ್ನು ಕೇಳದೆ ಜಿಲ್ಲಾಧಿಕಾರಿಗಳು ಯಾವ ಕೆಲಸ ಮಾಡುವುದಕ್ಕೂ ಈ ಕಾನೂನಿನಲ್ಲಿ ಅವಕಾಶವಿರಬಾರದು. ಮುನಿಸಿಪಾಲಿಟಿಯ ಅಧ್ಯಕ್ಷರಿಗೆ ಯಾವರೀತಿಯ ತಿಳಿವಳಿಕೆಯೂ ಇಲ್ಲದೆ, ಅವರ ಅಭಿಪ್ರಾಯವನ್ನು ಪಡೆಯದೆ ನೇರವಾಗಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿರುವುದು ಬಹಳ ತಪ್ಪು.

ಅದೇ ರೀತಿಯಾಗಿ ಚೀಫ್ ಆಫೀಸರ ವಿಷಯವೂ ಇದೆ. ಇವರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟರೆ ಮುನಿಸಿಪಲ್ ಪ್ರೆಸಿಡೆಂಟರು ಏಕೆ ಇರಬೇಕು? ಚೀಫ್ ಆಫೀಸರು ಮುನಿಸಿಪಾಲಿಟಿಯ ಅಧೀನದಲ್ಲಿ ಕೆಲಸ ಮಾಡುತ್ತಾರೆ. ಪ್ರೆಸಿಡೆಂಟರು ಮುನಿಸಿಪಾಲಿಟಿಯಲ್ಲಿ ಎಕ್ಸಿಕ್ಯೂಟಿವ್ ಹೆಡ್. ಇವರು ಹೇಳಿದಂತೆ ಚೀಫ್ ಆಫೀಸರು ಕೆಲಸ ಮಾಡಬೇಕು. ಇಂಥ ಅಧಿಕಾರಿಗೆ, ಮುನಿಸಿಪಲ್

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಪ್ರೆಸಿಡೆಂಟರ ಅಭಿಪ್ರಾಯವನ್ನು ಪಡೆಯದೆ ನೇರವಾಗಿ ಅಧಿಕಾರಿಗಳನ್ನು ನೇಮಕಮಾಡುವ ಅಧಿಕಾರ ವನ್ನು ಕೊಡುವುದು ಮುನಿಸಿಪಲ್ ಪ್ರೆಸಿಡೆಂಟರಿಗೆ ಗೌರವ ತರುವುದಿಲ್ಲ. ಚೀಫ್ ಆಫೀಸರಿಗೆ ಇಷ್ಟೊಂದು ಅಧಿಕಾರವಿರಬಾರದು ಎಂದು ನಾನು ಹೇಳುತ್ತೇನೆ.

ವಿಶೇಷ ಸಂದರ್ಭದಲ್ಲಿ ಮುನಿಸಿಪಲ್ ಕೌನ್ಸಿಲರನ್ನು ನಾಮಕರಣ ಮಾಡುವ ವಿಷಯ. ಅನೇಕ ಸಂದರ್ಭಗಳಲ್ಲಿ ನಾಮಕರಣ ಮಾಡತಕ್ಕ ಅಧಿಕಾರ ಸರ್ಕಾರದವರಿಗೆ ಸಿಕ್ಕುತ್ತದೆ. ಉದಾಹರಣೆಗೆ 25 ಜನ ಕೌನ್ಸಿಲರುಗಳಿದ್ದು ಒಬ್ಬರು 13 ಜನ ಸದಸ್ಯರ ಬೆಂಬಲದಿಂದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತ ರಾಗಿದ್ದು, ಒಬ್ಬ ಕೌನ್ಸಿಲರ್ ಸದಸ್ಯತ್ವವನ್ನು ಕಳೆದುಕೊಂಡರೆ, ಅಥವಾ ಅವರು ಹೊರಟು ಹೋದರೆ ಆಗ 12-12 ಸದಸ್ಯ ಬಲವಿರುತ್ತದೆ. ಇಂಥ ಸಂದರ್ಭದಲ್ಲಿ ಮುನಿಸಿಪಾಲಿಟಿಗಳಿಗೆ ಚುನಾವಣೆಗಳು ನಡೆಯದಂತೆ ಅಡಚಣೆಗಳನ್ನು ತರುತ್ತಾರೆ. ಅಂಥ ಸನ್ನಿವೇಶದಲ್ಲಿ ಅಥವಾ ಮುನಿಸಿಪಲ್ ಪ್ರೆಸಿಡೆಂಟರು ಸರ್ಕಾರಕ್ಕೆ ವಿರೋಧವಾದ ಪಕ್ಷಕ್ಕೆ ಸೇರಿದವರಾಗಿದ್ದರೆ ಆಗ ಸದಸ್ಯ ರನ್ನು ನಾಮಕರಣ ಮಾಡಲು ಅವಕಾಶವನ್ನುಂಟುಮಾಡುತ್ತಾರೆ. ಇದರಿಂದ ತಮಗೆ ಬೇಕಾದ ಪಕ್ಷ ಅಧಿಕಾರದಲ್ಲಿ ಬರುವಂತೆ ಮಾಡಲು ಅವಕಾಶವಿರುತ್ತದೆ. ಆದುದರಿಂದ ನಾಮಕರಣ ಪದ್ಧತಿಯನ್ನು ತಪ್ಪಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಮುನಿಸಿಪಾಲಿಟಿಗಳಿಗೆ ಪಂಚಾಯಿತಿಗಳನ್ನು ಸೇರಿಸಬೇಕಾದರೆ ಅಥವಾ ಅದರಲ್ಲಿ ಸೇರಿರುವ ಭಾಗಗಳನ್ನು ತೆಗೆಯಬೇಕಾದರೆ ಅಂಥ ಸಂದರ್ಭಗಳಲ್ಲಿ ಜನಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಒಂದು ನೋಟಿಫಿಕೇಶನ್ನು ಹೊರಡಿಸುವ ಅಧಿಕಾರವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಈ ರೀತಿ ಡಿಕ್ಲೇರ್ ಮಾಡುವುದಕ್ಕೆ ಮೊದಲು ಜನಗಳ ಅಭಿಮತವನ್ನು ತೆಗೆದುಕೊಳ್ಳಬೇಕು. ಸರ್ಕಾರದವರಿಗೇ ವಿಶೇಷವಾದ ಅಧಿಕಾರವಿರಬಾರದು ಎಂದು ಹೇಳುತ್ತೇನೆ.

ಯಾತ್ರಿಕರ ಮೇಲೆ ತೆರಿಗೆ ಹಾಕುವ ವಿಚಾರದಲ್ಲಿ ಅನೇಕ ಜನ ನನ್ನ ಸ್ನೇಹಿತರು ಹೇಳಿದ್ದಾರೆ. ಈ ರೀತಿ ಹಾಕುವುದು ಖಂಡಿತ ಬಹಳ ತಪ್ಪು. ಈಗಾಗಲೇ ಮುನಿಸಿಪಲ್ ಆಕ್ಟ್ರಾಯ್ ಇದೆ. ಅನೇಕ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ಈಗಾಗಲೇ ಬೀಳುತ್ತಿದೆ. ಇದನ್ನೇ ಸಹಿಸಲಾರದೆ ಇರುವಾಗ ಜಾತ್ರೆಗಳನ್ನು, ಪ್ರದರ್ಶನಗಳನ್ನು ಜನಗಳು ನೋಡಬೇಕಾದರೆ ಅವರ ಮೇಲೆ ತೆರಿಗೆಯನ್ನು ಹಾಕು ವುದು ದುಬಾರಿಯಾಗುತ್ತದೆ ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚೀಫ್ ಆಫೀಸರ ವರ್ಗ ಮಾಡುವ ವಿಚಾರದಲ್ಲಿ ಹೀಗೆ ಹೇಳಿದ್ದಾರೆ:

> "327(2) A Chief Officer of a Municipality shall be transferable from that office by a resolution of the municipal council at a general meeting, passed by a majority of not less than three-fourths of the total number of councillors."

ಇದರಿಂದ ಚೀಫ್ ಆಫೀಸರು ರಾಜಕೀಯಕ್ಕೆ ಇಳಿಯಬೇಕಾಗುತ್ತದೆ. ಯಾವ ಸಂದರ್ಭದಲ್ಲೇ ಆಗಲಿ ಅವರು ಮುನಿಸಿಪಲ್ ಪ್ರೆಸಿಡೆಂಟರ ಅಧೀನದಲ್ಲಿ ಇರಬೇಕೇ ಹೊರತು ಮುನಿಸಿಪಲ್ ಕೌನ್ಸಿಲ್ ಅಥವಾ ಬೇರೆ ಯಾರ ಅಧೀನದಲ್ಲಿಯೂ ಇರಬಾರದು. ಆ ರೀತಿ ಸೂಕ್ತ ಬದಲಾವಣೆಗಳನ್ನು ಮಾಡಬೇಕು.

ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಮುನಿಸಿಪಾಲಿಟಿಗಳ ಬಿಲ್ ವಿಚಾರದಲ್ಲಿ ಹೆಚ್ಚಾಗಿ ಮಾತನಾಡುವುದಿಲ್ಲ. ಅನೇಕ ಸಾರಿ ನಮ್ಮ ಕುಂದುಕೊರತೆಗಳನ್ನು ಹೇಳಿದ್ದರ ಮೇಲೆ, ಅವನ್ನು ಹೋಗಲಾಡಿಸುವುದಕ್ಕೋಸ್ಕರ ನಮ್ಮ ನಗರಾಡಳಿತ ಮಂತ್ರಿಗಳು ಇದರಲ್ಲಿ ಕೆಲವು ವಿಷಯ ಗಳನ್ನು ನಮೂದು ಮಾಡಿದ್ದಾರೆ. ಇದು ನನಗೆ ಬಹಳ ಸಂತೋಷವಾದ ವಿಷಯ. ಮುನಿಸಿ ಪಾಲಿಟಿಗಳಲ್ಲಾಗಲೀ ಅಥವಾ ಕಾರ್ಪೊರೇಷನ್ ಪ್ರದೇಶದಲ್ಲಾಗಲೀ ಅಧ್ಯಕ್ಷರು ಚುನಾಯಿತರಾಗ ಬೇಕಾದರೆ ಅಲ್ಲಿರುವ ಜನಗಳಿಂದ ಚುನಾಯಿತರಾಗಬೇಕು, ಮುನಿಸಿಪಲ್ ಕೌನ್ಸಿಲ್‌ನಿಂದ ಚುನಾಯಿತ ರಾಗುವ ಅಧ್ಯಕ್ಷರು ಬೇಡ ಎಂದು ನಾನು ಒಂದು ಸಲ ಹೇಳಿದೆ. ಆಗ ಅವರೂ ನನ್ನ ಇಷ್ಟವೂ ಅದೇ ಎಂದು ಹೇಳಿದರು. ಆದರೆ ಈ ಮಸೂದೆಯಲ್ಲಿ ಆ ರೀತಿ ಮಾಡಿಲ್ಲ. ಅದಕ್ಕೋಸ್ಕರ ಅದನ್ನು ಮಂತ್ರಿಗಳ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ.

ಅಸೆಂಬ್ಲಿಗೆ ಚುನಾಯಿತರಾಗುವ ಸದಸ್ಯರು ಟೌನ್ ಮತ್ತು ಹಳ್ಳಿಗಳಿಂದ ಓಟುಗಳನ್ನು ಪಡೆದು ಬರುತ್ತಾರೆ. ಆದರೂ ಅವರಿಗೆ ಮುನಿಸಿಪಾಲಿಟಿಯ ವಿಷಯವನ್ನು, ಅಲ್ಲಿನ ಜನಗಳ ತೊಂದರೆಗಳನ್ನು ತಿಳಿಸುವುದಕ್ಕೆ ಅವಕಾಶವಿಲ್ಲ. ತಾಲ್ಲೂಕು ಬೋರ್ಡಿನಲ್ಲಿ ಅಸೆಂಬ್ಲಿ ಸದಸ್ಯರನ್ನು ಎಕ್ಸ್-ಅಫಿಷಿಯೋ

ಸದಸ್ಯರಾಗಿ ಯಾವರೀತಿ ತೆಗೆದುಕೊಂಡಿದ್ದಾರೋ ಅದೇ ರೀತಿ ಮುನಿಸಿಪಾಲಟಿಯಲ್ಲೂ ತೆಗೆದು ಕೊಂಡರೆ ಜನಗಳ ಕುಂದುಕೊರತೆಗಳನ್ನು ಕೌನ್ಸಿಲ್ ಮುಂದೆ ತರುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಅವಕಾಶ ಕಲ್ಪಿಸಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇತ್ತೀಚೆಗೆ ಎಲ್ಲ ಕಡೆಯೂ, ಎಲ್ಲ ಊರುಗಳಲ್ಲಿಯೂ ಬಡಾವಣೆಗಳು ಹೆಚ್ಚುತ್ತ ಬಂದಿವೆ. ಇಂಥ ಬಡಾವಣೆಗಳನ್ನು ಮುನಿಸಿಪಾಲಟಿಗೆ ಸೇರಿಸಿಕೊಳ್ಳುವಾಗ ಅಲ್ಲಿರಬಹುದಾದ ಹಳ್ಳಿಗಳ ಜನರ ಅಭಿಪ್ರಾಯವನ್ನು ಕೇಳಬೇಕು ಎಂದು ಈಗತಾನೇ ಒಬ್ಬ ಸ್ನೇಹಿತರು ಹೇಳಿದರು. ಹಾಗೆ ಕೇಳಿದರೆ ಅವರು ತಮ್ಮ ಅಭಿಪ್ರಾಯವನ್ನು ಕೊಡುವುದಿಲ್ಲ. ಟೌನ್ ಪ್ರದೇಶಗಳಿಗೆ ಸುತ್ತಮುತ್ತಲೂ ಇರುವ ಹಳ್ಳಿಗಳವರು, ಪಂಚಾಯಿತಿಗಳವರು ಟೌನ್ ಪ್ರದೇಶಕ್ಕೆ ಸೇರಲು ಒಪ್ಪುವುದಿಲ್ಲ. ಅವುಗಳನ್ನು ಮುನಿಸಿಪಾಲಟಿಗೆ ಸೇರಿಸಲು ಅಧಿಕಾರವನ್ನು ಸರ್ಕಾರ ತೆಗೆದುಕೊಳ್ಳದೆ ಹೋದರೆ ಯಾವ ಕಾಲಕ್ಕೂ ಟೌನ್‌ಗಳು ಅಭಿವೃದ್ಧಿಯಾಗುವುದಿಲ್ಲ. ಮಂಡ್ಯ ಟೌನ್‌ನಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾದ ಮೇಲೆ ಆ ಊರು ಅಭಿವೃದ್ಧಿಯಾಗುತ್ತಿದೆ ಜನಸಂಖ್ಯೆ ಹೆಚ್ಚಾಗುತ್ತಿದೆ. ಊರಿನ ಬಡಾವಣೆಗೆ ಸ್ಥಳವನ್ನು ಸ್ವಾಧೀನ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಸರ್ಕಾರದವರು ಅಧಿಕಾರವನ್ನು ತೆಗೆದುಕೊಳ್ಳದೆ ಇದ್ದರೆ ತೊಂದರೆಯಾಗುತ್ತದೆ. ಅದಕ್ಕಾಗಿಯೇ ಸರ್ಕಾರದವರು ಇದರಲ್ಲಿ ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ. ಇದಕ್ಕಾಗಿ ಹಳ್ಳಿಗಾಡಿನಲ್ಲಿರುವ ಜನರ ಅಭಿಪ್ರಾಯವನು ಕೇಳಬೇಕಾದ್ದಿಲ್ಲ. ಅವರ ಅಭಿಪ್ರಾಯವನ್ನು ಕೇಳುತ್ತ ಹೋದರೆ ಅಭಿವೃದ್ಧಿಯಾಗುತ್ತಿರುವ, ಬಡಾವಣೆಯಾಗುತ್ತಿರುವ ಊರುಗಳಲ್ಲಿನ ಜನ ಬಹಳ ಇಕ್ಕಟ್ಟಿನಲ್ಲಿ ವಾಸಮಾಡಬೇಕಾಗುತ್ತದೆ. ಆದುದರಿಂದ ಸರ್ಕಾರದವರೇ ಅಧಿಕಾರವನ್ನು ತೆಗೆದುಕೊಳ್ಳುವುದು ಒಳ್ಳೆಯದು. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಎರಡು ವಿಷಯಗಳನ್ನು ಮಾತ್ರ ಎಂದರೆ ಪ್ರೆಸಿಡೆಂಟರು ಎಲ್ಲ ಪ್ರಜೆಗಳಿಂದಲೂ ಚುನಾಯಿತರಾಗಬೇಕು ಮತ್ತು ಅಸೆಂಬ್ಲಿಯ ಸದಸ್ಯರು ಆಯಾ ಊರುಗಳ ಜನರ ಕುಂದುಕೊರತೆಗಳನ್ನು ಹೇಳುವುದಕ್ಕೆ ಮುನಿಸಿಪಾಲಟಿಯ ಸದಸ್ಯರಾಗಿಯೂ ಕೆಲಸ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಈ ವರದಿಗೆ ಸಭೆಯು ಕೊಟ್ಟಿರುವ ಸ್ವಾಗತಕ್ಕಾಗಿ ನಾನು ವಂದಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಯಾವ ಸಭೆ ಸ್ವಾಮಿ ಸ್ವಾಗತಿಸಿದ್ದು ? ನಾವು ಸ್ವಾಗತಿಸಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ತಿಳಿವಳಿಕೆಯ ಪ್ರಕಾರ ಈ ಸಭೆ ಸ್ವಾಗತಿಸಿದೆ ಎಂದು ನಾನು ಭಾವನೆ ಮಾಡುತ್ತೇನೆ. ಕೆಲವು ಸದಸ್ಯರು ಕೆಲವು ಆಕ್ಷೇಪಣೆಗಳನ್ನು ಕೂಡ ಎತ್ತಿದ್ದಾರೆ. ಆ ಆಕ್ಷೇಪಣೆಗಳನ್ನು ಈ ಮಸೂದೆಯಲ್ಲಿ ತೆಗೆದುಹಾಕುವುದಕ್ಕೆ ಬಹುಶಃ ಆ ಸದಸ್ಯರು ಅಥವಾ ಇತರ ಮಾನ್ಯ ಸದಸ್ಯರು ತಿದ್ದುಪಡಿಗಳನ್ನು ಸೂಚಿಸಬಹುದು. ಅವು ಬಂದಂಥ ವೇಳೆಯಲ್ಲಿ ಅವುಗಳ ಮೇಲೆ ವಿವರವಾದ ಚರ್ಚೆಯಾಗುತ್ತದೆ. ಆ ಸಮಯದಲ್ಲಿ ನಾನು ಉತ್ತರವನ್ನು ಕೊಡುತ್ತೇನೆ.

ಈ ಸಭೆಯಲ್ಲಿ ಆದ ಚರ್ಚೆಯಲ್ಲಿ ಕೆಲವು ಅಂಶಗಳು ಹೊರಬಿದ್ದಿವೆ. ಒಂದನೆಯದು ಪಿಲಿಗ್ರಿಮ್ಸ್ ಟ್ಯಾಕ್ಸ್ ಹಾಕುವುದು ಸರಿಯಲ್ಲ ಈ ತೆರಿಗೆ ಬಹಳ ಆಕ್ಷೇಪಣಾರ್ಹ ತೆರಿಗೆ ಎಂದು ಸದಸ್ಯರು ಹೇಳಿದರು. ಸದಸ್ಯರಲ್ಲಿ ಒಂದು ವಿನಂತಿ ಮಾಡುತ್ತೇನೆ ಇದು ಹೊಸದೇನೂ ಅಲ್ಲ ಈ ವರದಿಯ 9ನೇ ಪುಟದಲ್ಲಿರುವ ಕ್ಲಾಸ್ ನನ್ನು ಸಂಪೂರ್ಣವಾಗಿ ಓದಿದರೆ ಬಹುಶ: ಅವರುಗಳು ಎತ್ತಿರತಕ್ಕ ಆಕ್ಷೇಪಣೆಗಳಿಗೆ ಅದೇ ಉತ್ತರವಾಗಿ ಪರಿಣಮಿಸಬಹುದು ಎಂದು ತಿಳಿಯುತ್ತೇನೆ.

> "At present taxes on pilgrims can be levied under the Municipal Acts in force in the Bombay and Hyderabad Areas. The Committee are of the opinion that it is desirable to have provision for levy of fees in respect of Jathras, Urs, etc., when special arrangements have to be made by the municipal council for the health and comfort of persons resorting periodcally for such jatras, etc., within the limits of the municipality. The Committee are of the opinion that such levy should be permitted only when sanctioned by the Government and the fee levied should not exceed fifty naye Paise on persons over twelve years of age resorting to any shrine, jathra or urs within the limits of the municipality. Provision should also be made that the proceeds of fees levied should be expended for making

(ಶ್ರೀ ಕೆ ಪುಟ್ಟಸ್ವಾಮಿ)

> arrangements for the health and comfort of persons resorting to such municipality, or the improvement or development of the area where such persons gather. This clause has accordingly been inserted."

5-30 P. M.

ಈಗ ಹೈದರಾಬಾದಿನ ಮತ್ತು ಬೊಂಬಾಯಿ ಪ್ರಾಂತ್ಯಗಳಿಂದ ಬಂದಿರತಕ್ಕ ಜಿಲ್ಲೆಗಳಲ್ಲಿ ಈ ತೆರಿಗೆ ಜಾರಿಯಲ್ಲಿದೆ, ಅದನ್ನು ವಿಧಾಯಕ ಮಾಡಿ ಕೆಲವು ಪುರಸಭೆಗಳಲ್ಲಿ ಸ್ವಲ್ಪಮಟ್ಟಿಗೆ ವರಮಾನ ಬರುತ್ತಾ ಇದೆ, ಅದು ಆ ಭಾಗದಲ್ಲಿ ಬಂದಂಥಾ ಯಾತ್ರಾರ್ಥಿಗಳಿಗೆ ಬೇಕಾದ ಸೌಲಭ್ಯಗಳನ್ನು ಏರ್ಪಡಿಸುವುದಕ್ಕೆ ವಿನಿಯೋಗವಾಗುತ್ತಾ ಇದೆ. ಜಾಯಿಂಟ್ ಸೆಲೆಕ್ಟ್ ಸಮಿತಿಯಲ್ಲೂ ಬಹಳ ದೀರ್ಘವಾಗಿ ವಿಮರ್ಶೆ ಮಾಡಿದ ನಂತರ ಇದನ್ನು ಒಂದು ಮಿತವಾದಂತಹ ರೀತಿಯಲ್ಲಿ ಇಟ್ಟುಕೊಳ್ಳುವುದು ಯೋಗ್ಯವಾದದ್ದು ಎಂದು ಭಾವನೆ ಮಾಡಿ ಇದನ್ನು ಶಿಫಾರಸು ಮಾಡಿದ್ದಾರೆ. ನಮ್ಮ ಅನುಭವಕ್ಕೆ ಬಂದಿರುವಂತೆ ಅನೇಕ ಯಾತ್ರಾರ್ಥಿಗಳು ಹೋಗತಕ್ಕ ಯಾತ್ರಾಸ್ಥಳಗಳಲ್ಲಿ ಬಂದಂಥಾ ಯಾತ್ರಾರ್ಥಿಗಳ ಯೋಗಕ್ಷೇಮಕ್ಕೆ ಬೇಕಾದ ಸೌಲಭ್ಯಗಳ ಕಡೆಗೆ ಅಷ್ಟಾಗಿ ಗಮನ ಕೊಡುವುದಕ್ಕೆ ಆಗಿಲ್ಲ. ಅಲ್ಲಿಯ ಪುರಸಭೆಗಳಿಗೆ ವರಮಾನ ಕಡಿಮೆ ಇರುವುದರಿಂದಲೂ, ಅವರ ಹಣದಲ್ಲಿ ಅಲ್ಲಿ ಬಂದಂಥಾ ದೊಡ್ಡ ಸಮೂಹಕ್ಕೆ ಬೇಕಾದ ಸೌಲಭ್ಯಗಳನ್ನು ಏರ್ಪಡಿಸುವುದಕ್ಕೆ ಸಾಧ್ಯವಾಗದೇ ಅನೇಕ ಯಾತ್ರಾಸ್ಥಳಗಳಿಗೆ ಹೋದಾಗ ಅವರಿಗೆ ಅಗತ್ಯವಾದ ನಾಗರಿಕ ಸೌಲಭ್ಯಗಳು ದೊರಕದೇ ಬಹಳ ತೊಂದರೆಪಡತಕ್ಕ ಸನ್ನಿವೇಶಗಳನ್ನು ನೋಡುತ್ತಾ ಇದ್ದೇವೆ. ಅನೇಕ ನದಿ ದಡದಲ್ಲಿರತಕ್ಕ ಪಟ್ಟಣಗಳಲ್ಲಿ ಆ ನದಿಯ ನೀರನ್ನು ಕುಡಿಯುವುದಕ್ಕೂ ಕೂಡ ಅಸಹ್ಯವಾಗುವಂತಹ ರೀತಿಯಲ್ಲಿ ಕಡಿಸಿರುತ್ತಾರೆ ಅದನ್ನು ಸರಿಯಾದ ರೀತಿಯಲ್ಲಿ ಅಲ್ಲಿಯ ನೈರ್ಮಲ್ಯ ಕಾಪಾಡಬೇಕೆಂದು ಪುರಸಭೆ ಪ್ರಯತ್ನ ಮಾಡಿದರೆ ಅದಕ್ಕೆ ಬಹಳ ಹಣ ಖರ್ಚಾಗುತ್ತದೆ ಅದನ್ನು ಅವರು ಒದಗಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಯಾತ್ರೆ ಅಥವಾ ಉರುಸ್ ನಡೆಯತಕ್ಕ ದಿನಗಳಲ್ಲಿ ಉತ್ಸವ ನಡೆಯತಕ ಕಾಲದಲ್ಲಿ ಆ ಭಾಗಕ್ಕೆ ಹೋಗತಕ್ಕ ಜನರಿಂದ ಕೆಲವೊಂದು ಫೀಜುರೂಪದಲ್ಲಿ ಹಣವನ್ನು ತೆಗೆದುಕೊಂಡು ಅದನ್ನು ಅಲ್ಲಿಗೆ ಬರತಕ್ಕ ಯಾತ್ರಾರ್ಥಿಗಳಿಗೆ ಬೇಕಾದ ಸೌಲಭ್ಯಗಳನ್ನು ಏರ್ಪಡಿಸುವುದಕ್ಕೆ ಉಪಯೋಗ ಮಾಡುವುದು ಅಷ್ಟೇನೂ ಆಕ್ಷೇಪಣಾರ್ಹವಾಗಲಾರದು ಎಂಬುದನ್ನು ಮನಗಂಡು ಸಮಿತಿಯವರು ಈ ವರದಿಯಲ್ಲಿ ಇದನ್ನು ಶಿಫಾರಸು ಮಾಡಿದ್ದಾರೆ. ಅದು ಇಲ್ಲಿ ಅಡಕವಾಗಿದೆ. ಬಹುಶಃ ಸಭೆ ಇದನ್ನು ಒಪ್ಪಬಹುದೆಂದು ನಿರೀಕ್ಷೆ ಮಾಡುತ್ತೇನೆ. ಈ ತೆರಿಗೆಯನ್ನು ಹಾಕುವಾಗಲೂ ಸರ್ಕಾರದ ಮಂಜೂರಾತಿಯನ್ನು ಪಡೆಯಬೇಕಾಗಿದೆ. ಎಲ್ಲಾ ದಿನಗಳಲ್ಲೂ ತೆರಿಗೆಯನ್ನು ಹಾಕಿ ವಸೂಲುಮಾಡುವ ಹಾಗಿಲ್ಲ. ಸರ್ಕಾರ ಮತ್ತು ಈ ಸಭೆ ಇದನ್ನು ಒಪ್ಪಿ ಅವಕಾಶ ಕೊಟ್ಟಿದ್ದೇ ಆದರೆ ಇದರ ಅವಶ್ಯಕತೆ ಎಲ್ಲಿ ಇದೆಯೋ ಅಂಥ ಸ್ಥಳಗಳಿಗೆ ಮಾತ್ರ ಇದರ ಅವಕಾಶವನ್ನು ಕೊಟ್ಟು ಅಲ್ಲಿಗೆ ಬಂದಂಥಾ ಅನೇಕ ಯಾತ್ರಾರ್ಥಿಗಳಿಗೆ ಅವರಿಗೆ ಅಗತ್ಯವಾಗಿ ಬೇಕಾದ ಸೌಲಭ್ಯಗಳನ್ನು ಏರ್ಪಡಿಸುವುದಕ್ಕೆ ಉಪಯೋಗಿಸುವಂತಹ ರೀತಿಯಲ್ಲಿ ಸರ್ಕಾರ ಏರ್ಪಾಡು ಮಾಡುತ್ತದೆ ಎಂದು ಮಾತ್ರ ಭರವಸೆ ಕೊಡುತ್ತೇನೆ.

ಇನ್ನೊಂದು ಆಕ್ಷೇಪಣೆ ಎಂದರೆ ಸರಹದ್ದುಗಳನ್ನು ವಿಶಾಲ ಮಾಡುವಂತಹ ಸೌಲಭ್ಯ. ಅದಕ್ಕೆ ಸಂಬಂಧಪಟ್ಟಂತಹ ಗ್ರಾಮಗಳವರನ್ನು ಕೇಳಿ ಮಾಡಬೇಕೆಂದು ಇದರಲ್ಲಿ ಅಡಕವಾಗಿದೆ. ಇದರ ಜವಾಬ್ದಾರಿ ಸರ್ಕಾರದಮೇಲೆ ಇರುವುದರಿಂದ ಕೆಲವು ಪುರಸಭೆಗಳು ತಮ್ಮ ಸರಹದ್ದನ್ನು ಬಡಾಯಿಸಿಕೊಳ್ಳಬೇಕಾದ ಅಗತ್ಯವಿದ್ದರೂ ಅದನ್ನು ಒಪ್ಪದೇ ಅಲ್ಲಿ ತೊಂದರೆಯಾಗಿರತಕ್ಕ ನಿದರ್ಶನಗಳು ಕೆಲವು ಇವೆ. ಕೆಲವು ಕಡೆ ಪುರಸಭೆಗಳು ತಮ್ಮ ಸರಹದ್ದನ್ನು ವಿಶಾಲ ಮಾಡಬೇಕೆಂದು ಪ್ರಯತ್ನ ಮಾಡಿದರೂ ಅದಕ್ಕೆ ಅಡಚಣೆ ಆಗತಕ್ಕ ಸಂದರ್ಭಗಳು ಇವೆ, ಈ ಎರಡು ಸಂದರ್ಭಗಳಲ್ಲೂ ಸರ್ಕಾರದವರೇ ಅದರ ಜವಾಬ್ದಾರಿಯನ್ನು ವಹಿಸಿ ಆಖೈರಾದ ತೀರ್ಮಾನವನ್ನು ಮಾಡಬೇಕು. ಆಯಾಯ ಪುರಸಭೆಗೆ ಸಂಬಂಧಪಟ್ಟ ಎಲ್ಲಾ ಜನರನ್ನೂ ಅವರ ಆಕ್ಷೇಪಣೆ ಅಭಿಪ್ರಾಯವನ್ನು ಕೇಳಿ ಅದನ್ನು ಪರಿಶೀಲನೆ ಮಾಡಿ ಸರ್ಕಾರ ತೀರ್ಮಾನಮಾಡಬೇಕೆಂದು ಈ ಮಸೂದೆಯಲ್ಲಿ ಅಡಕಮಾಡಿರುವುದರಿಂದ ಬಹುಶಃ ಇದರಿಂದ ಯಾರಿಗೂ ತೊಂದರೆಯಾಗದಂತೆ ಇದು ಇದೆ ಎಂದು ನಾನು ಭಾವನೆ ಮಾಡಿದ್ದೇನೆ.

ಇನ್ನು ಆಕ್ಟ್ರಾಯ್ ವಿಚಾರದಲ್ಲಿ ಶ್ರೀಮಾನ್ ಅಣ್ಣಾರಾಯರು ಇದು ಔಟ್‌ಮೋಡೆಡ್ ಟ್ಯಾಕ್ಸ್ ಇದನ್ನು ಇಟ್ಟುಕೊಳ್ಳದೇ ಇರುವುದು ಮೇಲು ಎಂದು ಹೇಳಿದರು ಆ ವಿಚಾರದಲ್ಲಿ ನಾನು ಅಷ್ಟು ಚರ್ಚೆಗೆ

ಹೋಗುವುದಿಲ್ಲ. ಆಕ್ಟ್ರಾಯ್ ಸುಂಕ ಮಾತ್ರ ಬಹಳ ತೊಂದರೆ ಕೊಡತಕ್ಕ ಸುಂಕ ಎಂದು ಹೇಳುತ್ತೇನೆ. ಸುಂಕ ವಸೂಲುಮಾಡತಕ್ಕ ವೇಳೆಯಲ್ಲಿ ಅನೇಕ ತೊಂದರೆಗಳಾಗುತ್ತವೆ ಎಂಬ ಅಂಶ ನನ್ನ ಗಮನಕ್ಕೆ ಬಂದಿದೆ. ಆದರೆ ಇದೇ ಈಗ ನಮ್ಮ ಮೈಸೂರು ದೇಶದ ಪುರಸಭೆಗಳಿಗೆ ಇರತಕ್ಕ ಜೀವಾಳ, ಬಂಡವಾಳ ಇದು ಇಲ್ಲದೇ ಇದ್ದರೆ ಬಹುಶಃ ಅನೇಕ ಪುರಸಭೆಗಳು ತಮ್ಮಮೇಲೆ ಇರತಕ್ಕ ಕರ್ತವ್ಯಗಳನ್ನು ನಿರ್ವಹಿಸಲಾರದು ಎಂಬ ವಿಚಾರದಲ್ಲಿ ಯಾವ ಬಿನ್ನಾಭಿಪ್ರಾಯಕ್ಕೂ ಅಸ್ಪದವಿಲ್ಲ ಎಂದು ನಾನಾದರೂ ತಿಳಿಯುತ್ತೇನೆ. ಒಂದು ಆಕ್ಷೇಪಣೆಯನ್ನು ಮಾನ್ಯಸದಸ್ಯರೊಬ್ಬರು ಹೇಳಿದರು ರೈತರು ಬೆಳೆದು ತರತಕ್ಕ ಸಾಮಾನಿನಮೇಲೆ ಅನಾವಶ್ಯಕವಾಗಿ ತೆರಿಗೆ ಹಾಕಿ ರೈತನಿಂದ ವಸೂಲು ಮಾಡಿ ಅದನ್ನು ಪಟ್ಟಣದ ಜನರ ಸೌಕರ್ಯಕ್ಕೆ ಉಪಯೋಗಿಸುವುದು ಯಾವ ನ್ಯಾಯ ಎಂದು ಕೇಳಿದರು. ಒಂದು ಅಂಶವನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು ಸುಂಕವನ್ನು ರೈತನಿಂದ ವಸೂಲು ಮಾಡಿದರೂ ಅಖೈರಾಗಿ ಆ ತೆರಿಗೆ ಬೀಳುವುದು ಕನ್‌ಸ್ಯೂಮರ್ ಮೇಲೆ ಯಾರೂ ಸಾಮಾನನ್ನು ಉಪಯೋಗಿಸುವುದಕ್ಕೆ ಕೊಂಡುಕೊಳ್ಳುತ್ತಾರೆ ಅವರ ಮೇಲೆ ಬೀಳುತ್ತದೆ. ಬೆಂಗಳೂರು ಅಥವಾ ಮೈಸೂರು ಇಂಥಾ ಪಟ್ಟಣಗಳಿಗೆ ಯಾವ ಸಾಮಾನು ತಂದರೂ ಕೂಡ ಆ ಪಟ್ಟಣಗಳ ಜನರ ಉಪಯೋಗಕ್ಕೆ ಬರುತ್ತದೆ ಅದ್ದರಿಂದ ಮೊದಲಲ್ಲಿ ಕೊಡತಕ್ಕವನು ವ್ಯಾಪಾರಿಯಾಗಿರಬಹುದು ಅಥವಾ ರೈತನಾಗಿರಬಹುದು ಅದರ ಭರಬಳಕೆದಾರರ ಮೇಲೆ ಬೀಳುವುದರಿಂದ ಈ ತೆರಿಗೆ ನಾಗರಿಕ ಸೌಲಭ್ಯ ಪಡೆಯತಕ್ಕ ಆ ಊರಿನ ನಾಗರಿಕ ಕೊಡುತ್ತಾನೆ, ಇದು ಪರೋಕ್ಷವಾದ ತೆರಿಗೆ ಪ್ರತ್ಯಕ್ಷವಾದ ತೆರಿಗೆಯಲ್ಲ ಎನುವುದನ್ನು ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಮನೆಗಂದಾಯ ಹೆಚ್ಚಿಸಕೂಡದು ಎಂದು ಹೇಳಿದರು ಮನೆಯ ಮೇಲಿನ ತೆರಿಗೆಯನ್ನು ಸಾಕಾದಷ್ಟು ಪ್ರಮಾಣದಲ್ಲಿ ಹಾಕುತ್ತಾ ಇದೆ, ಮೈಸೂರು ದೇಶದಲ್ಲಿ ಶೇಕಡ 5ರಿಂದ ಶೇಕಡ 27ರವರೆಗೂ ಮನೆ ಕಂದಾಯ ಹಾಕುತ್ತಾ ಇದೆ.

ಈಗ ಈ ಮಸೂದೆಯಲ್ಲಿ ಅಡಕವಾಗಿರುವಂತೆ ಟೌನು ಮುನಿಸಿಪಾಲಿಟಿಗಳಿಗೆ, ಮನೆಯ ಒಂದು ವರ್ಷದಬಾಡಿಗೆಯಲ್ಲಿ ಶೇಕಡ 12.50ನ್ನು ತೆರಿಗೆ ವಿಧಿಸಬಹುದೆಂದೂ, ಸಿಟಿಮುನಿಸಿಪಾಲಿಟಿಗಳಲ್ಲಿ ಶೇಕಡ 17.50ನ್ನು ವಿಧಿಸಬಹುದೆಂದೂ ಹೇಳಲಾಗಿದೆ. ಇದಕ್ಕನುಸಾರವಾಗಿ ಈ ಮಸೂದೆಯಲ್ಲಿ ಮಾರ್ಪಾಡು ಮಾಡಲಾಗಿದೆ. ಇಷ್ಟು ಕೆಲಸ ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಅನುಭವಶಾಲಿಗಳು ತೋರಿಸಿದ ಶ್ರದ್ಧೆ ಹಾಗೂ ಸಲಹೆಗಳಿಂದ ಆಯಿತೆಂದು ಹೇಳಬಹುದು.

ಶ್ರೀಮಾನ್ ದೇವ್ ಅವರು ಸ್ವಾರಸ್ಯವಾಗಿ ವಿಚಾರವನ್ನು ಹೇಳುತ್ತಾ ಇದರ ಹಿನ್ನಲೆ, ಇದರ ಹಿನ್ನಲೆ ಎಂದು ಅವರ ಭಾಷಣದ ಮೊದಲಿಂದಲೂ ಕಡೆಯ ತನಕ ಆ ಹಿನ್ನಲೆಯಲ್ಲೇ ಪ್ರಾರಂಭವಾಗಿ ಆ ಹಿನ್ನಲೆಯಲ್ಲೇ ಮುಕ್ತಾಯವೂ ಆಯಿತು. ಆದರ ಅವರು ನಮಗ್ಯಾರಿಗೂ ತಿಳಿಯದಷ್ಟು ವಿಚಾರಗಳನ್ನು ತಿಳಿಸಿದ್ದೇವೆಂದು ತಿಳಿದುಕೊಂಡಿದ್ದರೆ ಬಹಳ ಸಂತೋಷ. ಆದರೆ ಅವರು ಅಧ್ಯಕ್ಷರ ಅಧಿಕಾರದ ಹಿನ್ನಲೆಯನ್ನು ಮಾತನಾಡುತ್ತಾ, ಈ ಸಮಿತಿಯ ಸದಸ್ಯರಿಗೇನಾದರೂ ಈ ವಿಚಾರದಲ್ಲಿ ಅನುಭವ ಇತ್ತೆ ಎಂದರು.

ಮಾನ್ಯಸದಸ್ಯರು ಸಾಕಷ್ಟು ಹೇಳಿದರೂ ನಮಗಂತೂ ಅವರೇನು ಹೇಳಿದರೆಂಬುದು ಅರ್ಥವಾಗಿಲ್ಲ. ಅಂತೂ ಅವರು ಇದು ಒಂದು ಅಸಂಬದ್ಧವಾದ ಬಿಲ್ಲು, ಅರ್ಥವಿಲ್ಲದ ಬಿಲ್ಲು ಎಂಬುದಾಗಿ ಹೇಳಿದರು. ಆದರೆ ಅವರಿಗೆ ಇದರಬಗ್ಗೆ ಇರತಕ್ಕ ಅನುಭವ ಅವರಿಗೆ ಇದರ ವಿಚಾರಗಳು ಗೊತ್ತಿದ್ದಂತೆ ಬೇರೆಯವರಿಗೆ ಗೊತ್ತಿಲ್ಲ ಎಂಬುದು ಕೇವಲ ಅವರ ಒಂದು ಭಾವನೆ. ಈ ಬಿಲ್ಲಿನ ವಿಚಾರವಾಗಿ ಒಂದೇಮಾತಿನಲ್ಲಿ ಹೇಳುವುದಾದರೆ ಈ ಸಮಿತಿಯಲ್ಲಿದ್ದಂಥ ಸದಸ್ಯರುಗಳೆಲ್ಲಾ ಇದರ ವಿಚಾರದಲ್ಲಿ ದೀರ್ಘಶ್ರಮವುಳ್ಳವರೂ, ಹೆಚ್ಚಿನ ಅನುಭವ ಉಳ್ಳವರೂ, ಮತ್ತು ಈ ಮನೆಯ ಹಾಗೂ ಮೇಲ್ಮನೆಯಲ್ಲಿ ಬಹಳ ದಿವಸಗಳಿಂದಲೂ ಸದಸ್ಯರಾಗಿದ್ದು ಅನುಭವಪಡೆದಿದ್ದಂಥ ಸದಸ್ಯರುಗಳೇ ಇದ್ದು ಇದರಲ್ಲಿ ಭಾಗವಹಿಸಿ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿರುವುದರಿಂದ ನಾನಾದರೂ ಈ ಮಸೂದೆ ಇಂಥ ಒಂದು ಸಭೆಯ ಅಂಗೀಕಾರಕ್ಕೆ ಯೋಗ್ಯವಾದ ಮಸೂದೆಯಾಗಿರುತ್ತದೆಂದು ತಿಳಿದಿದ್ದೇನೆ. ಈ ಕಾರಣದಿಂದ ನಾನು ಈ ಸಮಿತಿಯ ಸದಸ್ಯರನ್ನು ಅಭಿನಂದಿಸಬೇಕಾದುದು ನನ್ನ ಕರ್ತವ್ಯ ನಮ್ಮ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಸದಸ್ಯರಿಗಿದ್ದ ಅನುಭವ ದೈವದತ್ತವಾದ್ದು. ಅಂಥ ಅನುಭವ ಅವರಲ್ಲಿರಲಿಲ್ಲ ಎಂದರೆ ಅದಕ್ಕೆ ನಾವು ಆ ಸೃಷ್ಟಿಕರ್ತನನ್ನು ದೂಷಿಸಬೇಕೆ ವಿನಾ ಬೇರೇನೂ ಹೇಳುವಹಾಗಿಲ್ಲ. ಆದರೆ ಶ್ರೀಮಾನ್ ದೇವ್ ಅವರಗಿರುವಂಥ ಪ್ರತಿಭೆ ನಮಗಿಲ್ಲ.

ಇನ್ನು ಶ್ರೀಮಾನ್ ಸುಂಥನಕರ್ ಅವರು ಮಾತನಾಡುತ್ತಾ ಇದು ಪ್ರಗತಿಗೆ ಬಹಳ ವಿರೋಧವಾದಂಥ ಬಿಲ್ಲು, ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡಬೇಕಾಗಿತ್ತು, ಅದಕ್ಕೆ ಬದಲಾಗಿ ಇದ್ದ ಅಧಿಕಾರವನ್ನೇ ಕಿತ್ತುಕೊಂಡಿದ್ದಾರೆಂದು ಅವರು ಹೇಳಿದರು. ಈ ಹಿಂದೆ ಈ ಮಸೂದೆ ಸಭೆಯ ಮುಂದೆ ಬಂದಿದ್ದಾಗಲೂ ಅವರು ಇದೇ ವಾದ ಮಾಡಿದ್ದರು. ಇದನ್ನು ನಾನು ಅವರಿಗೆ ಬಹಳ ನಮ್ರವಾಗಿ ತಿಳಿಸುತ್ತಿದ್ದೇನೆ. ಈಗ ನಮ್ಮ ಮೈಸೂರಿನಲ್ಲಿರತಕ್ಕ ಮತ್ತು ಈ ಹಿಂದೆ

(ಶ್ರೀ ಕೆ. ಪುಟ್ಟಸ್ವಾಮಿ)

ಇದ್ದ ಶಾಸನಗಳು ಅಂದರೆ ಮುನಿಸಿಪಲ್ ಆಕ್ಟುಗಳ ಮಾದರಿ ಆಕ್ಟ್‌ಗಳಾಗಿದ್ದವೆಂದರೆ ಅತಿಶಯೋಕ್ತಿಯಲ್ಲ. ಈಗಿರತಕ್ಕ ಬಿಲ್ಲನ್ನು ಕೂಡ ನಾವು 1933ನೆಯ ಮೈಸೂರು ಸಿಟಿ ಮುನಿಸಿಪಾಲಿಟಿ ಆಕ್ಟ್‌ನ್ನು ಮಾದರಿಯಾಗಿಟ್ಟುಕೊಂಡು ಮಾಡಲಾಗಿದೆ. ಹಳೇಮೈಸೂರು ಭಾಗದಲ್ಲಿ ಪೌರಸಭೆಯ ಆಡಳಿತಗಳು ಕಾನೂನುರೀತ್ಯ ನಡೆದಿರುತ್ತವೆ. ಪಟ್ಟಣಗಲ್ಲಿರತಕ್ಕ ನಾಗರಿಕರಿಗೆ ದೊರಕಿಸಿಕೊಡಬಹುದಾದ ಸೌಲಭ್ಯಗಳನ್ನೆಲ್ಲಾ ಪುರಸಭೆಗಳು ದೊರಕಿಸಿ ಕೊಟ್ಟಿರುತ್ತವೆಯೇ, ಇಲ್ಲವೇ ಎಂಬುದನ್ನು ಪರಿಶೀಲಿಸಲು ನಾನೀ ಸಂದರ್ಭದಲ್ಲಿ ಶ್ರೀ ಸುಂಥನಕರರಿಗೆ ಆಹ್ವಾನಕೊಡಲಿಚ್ಛಿಸುತ್ತೇನೆ. ಈ ದಿವಸ ಶ್ರೀಮಾರ್ ಸುಂಥನ್‌ಕರ್ ಅವರು ಯಾವಪ್ರದೇಶದಿಂದ ಬರುತ್ತಿದ್ದಾರೋ ಅಂಥ ಪ್ರದೇಶದಲ್ಲಿ ಎಷ್ಟು ಅಧಿಕಾರವನ್ನು ಅಲ್ಲಿ ಕೊಟ್ಟಿದ್ದಾರೆಂಬುದನ್ನೂ ನಾನು ನೋಡಿಕೊಂಡು ಬಂದಿದ್ದೇನೆ. ನನಗೆ ಅವರ ಸ್ಥಳದ ಮಾಹಿತಿಯೂ ಇದೆ. ಆದರೆ ಅವರು ಎಲ್ಲಿಂದ ಬರುತ್ತಿದ್ದಾರೋ ಆ ಸ್ಥಳಕ್ಕಿಂತಲೂ ಬಹಳ ಚೆನ್ನಾಗಿ ಆಡಳಿತ ಇಲ್ಲಿ ನಮ್ಮಲ್ಲಿ ನಡೆಯುತ್ತಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಆದರೆ ಶ್ರೀ ಸುಂಥನ್‌ಕರ್ ಅವರು ವಿಚಾರವನ್ನು ತಿಳಿದ ಮೇಲಾದರೂ ತಕರಾರು ಮಾಡಬಾರದೆಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಆ ಮಾನ್ಯ ಸದಸ್ಯರಿಗೆಷ್ಟು ಅಬಿಮಾನವಿದೆಯೋ, ನಂಬಿಕೆಯಿದೆಯೋ ಅಷ್ಟೇ ನಮಗೂ ಇದೆ. ಈ ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬೇಕು, ಇವುಗಳಿಗೂ ಹೆಚ್ಚಿನ ಅಧಿಕಾರವಿರಬೇಕು ಎನ್ನುವ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ ಈ ನಗರ ಸಭೆಗಳು ಅವುಗಳ ಆಡಳಿತವನ್ನು ಯಾವರೀತಿ ನಡೆಸುತ್ತಿದೆ ಎಂಬುದನ್ನು ಕಣ್ಣಿಟ್ಟು ನೋಡಬೇಕಾದ್ದು ಸರ್ಕಾರದ ಕರ್ತವ್ಯವು ಹೌದು. ಈ ಪಟ್ಟಣ ಮತ್ತು ನಗರಗಳಲ್ಲಿರತಕ್ಕ ನಾಗರಿಕರ ಸೌಕರ್ಯಗಳನ್ನು ಒದಗಿಸಬೇಕಾದ್ದು ಪೌರಸಭೆಗಳ ಕರ್ತವ್ಯವಾದರೂ ಅದು ಸರ್ಕಾರಕ್ಕೂ ಸೇರಿರುತ್ತದೆ. ಪ್ರತಿಯೊಂದು ಪಟ್ಟಣದಲ್ಲೂ ಅಗತ್ಯವಾಗಿರಬೇಕಾದ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ, ದೀಪ ಇತ್ಯಾಧಿಗಳನ್ನೆಲ್ಲಾ ಒವಗಿಸಬೇಕೆಂಬ ಒಂದು ಶಾಸನವನ್ನು ಈ ಸಭೆಯವರು ತಯಾರುಮಾಡಿ ಅದನ್ನು ಸರ್ಕಾರ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಈ ದಿವಸ ಈ ಶಾಸನವನ್ನು ಏತಕ್ಕಾಗಿ ಮಾಡುತ್ತಿದ್ದೇವೊ ಆ ಉದ್ದೇಶಕ್ಕೆ ಅಡ್ಡಿಬರುವಂಥ ದುಷ್ಟಶಕ್ತಿಗಳಿದ್ದರೆ ಅವುಗಳನ್ನು ತಡೆಗಟ್ಟಬೇಕಾದ್ದು ಸರ್ಕಾರದವರ ಕರ್ತವ್ಯ. ಅಂಥಕ್ಕೆ ಈ ಸರ್ಕಾರ ಅವಕಾಶಕೊಡುವುದಿಲ್ಲವೆಂದು ನಾನೀಗ ಭರವಸೆ ಕೊಡುತ್ತೇನೆ,

ಇನ್ನು ಪುರಸಭೆಗಳ ಆಡಳಿತ ವಿಚಾರದಲ್ಲಿ ಇಲ್ಲಿಯತನಕ ಇದ್ದಂಥ ಒಂದು ದೊಡ್ಡ ಅತಂಕವೆಂದರೆ ಅದು ಆ ನೌಕರೀವರ್ಗದವರದು. ಒಂದೊಂದು ಮುನಿಸಿಪಾಲಿಟಿಯಲ್ಲಿ ಇರತಕ್ಕ ನೌಕರರು ಅಲ್ಲೇಹುಟ್ಟಿ, ಅಲ್ಲಿಯೇ ಬೆಳೆದು, ಅಲ್ಲೇ ಕೆಲಸಕ್ಕೂಸೇರಿ, ಅದೇ ಊರಿನಲ್ಲೇ ರಿಟೈರ್‌ಕೂಡ ಆಗಿದ್ದಾರೆ. ಇಂಥ ನಿದರ್ಶನಗಳು ಅನೇಕವಾಗಿವೆ. ಇದರಿಂದ ಪುರಸಭೆಗಳ ಆಡಳಿತಕ್ಕೆ ಒಂದು ದೊಡ್ಡ ಆತಂಕ ಉಂಟಾಗಿತ್ತು. ಈ ಮಸೂದೆಯಲ್ಲಿ ಆ ತೊಂದರೆಯನ್ನು ತಪ್ಪಿಸಲು ಪ್ರಯತ್ನಮಾಡಲಾಗಿದೆ.

ಒಂದು ವೇಳೆ ಇಂತಹ ಅಧಿಕಾರಿಗಳಿಂದ ಪೌರಸಭೆಯ ಆಡಳಿತ ಉತ್ತಮವಾಗಬಹುದು. ಒಂದೇ ಸ್ಥಳದಲ್ಲಿರುವ ಅಧಿಕಾರಿಗಳು ಅವರ ಬಂಧು ಬಳಗದವರು ಎಲ್ಲರೂ ಒಂದೇ ಜಾಗದಲ್ಲಿದಿದ್ದರೆ ಅವರು ಅಧಿಕಾರದಲ್ಲಿರುವಾಗ ತಮ್ಮ ನಿತ್ಯಜೀವನದಲ್ಲಿ ಸಂಬಂಧಪಟ್ಟಂತೆ ನಿಷ್ಪಕ್ಷಪಾತವಾದಂತಹ ತೀರ್ಮಾನ ಮಾಡಲು ತೊಂದರೆಯಾಗಬಹುದು, ಎಂದರೆ ತೀರ್ಮಾನಗಳನ್ನು ನಿಷ್ಪಕ್ಷಪಾತವಾಗಿ ಆಚರಣೆಗೆ ತರುವುದು ಸ್ವಲ್ಪ ಕಷ್ಟವಾಗುತ್ತದೆ. ಹೀಗೆ ಹೇಳುವಾಗ ನಾನು ಯಾರನ್ನೂ ಆಕ್ಷೇಪಣೆ ಮಾಡುತ್ತಿಲ್ಲ. ನಮ್ಮ ಅಧಿಕಾರಿಗಳಿರುವ ಅನುಭವ ಮತ್ತು ಅವರಿಗಿರತಕ್ಕ ಶಕ್ತಿಯನ್ನು ಬೇರೆ ಪಟ್ಟಣಗಳಲ್ಲಿಯೂ ಜನೋಪಯುಕ್ತವಾಗಿ ಬಳಸಲು ಅನುಕೂಲವಾಗುವಂತೆ Municipal Administrative Service ಎನ್ನುವಂತಹ ಕೇಡರನ್ನು ತರುವುದೊಳ್ಳೆಯದು ಎಂದು ಇದರಲ್ಲಿ ಅಡಕ ಮಾಡಲಾಗಿದೆ. ಇದರಿಂದ ಆಡಳಿತ ಇನ್ನೂ ಉತ್ತಮವಾಗಲು ಅನುಕೂಲವಾಗುತ್ತದೆ. ಅನೇಕ ವೇಳೆ ಸರಿಯಾದ ಸರ್ವಿಸ್ಸು ಆಗಿ ಅನುಭವಸ್ಥ ಅಧಿಕಾರಿಗಳು ಇಲ್ಲದೇ ಇರುವುದರಿಂದ ತೊಂದರೆಯಾಗಿದೆ.

ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನು ಇಲ್ಲಿ ಹೇಳಿದರು. ಪ್ರೆಸಿಡೆಂಟರಿದ್ದರೂ ಅವರಿಗೆ ಸಾಕಷ್ಟು ಜವಾಬುದಾರಿ ಇಲ್ಲ ಎಂದೂ ಮತ್ತು ಎಲ್ಲ ಜವಾಬುದಾರಿಗಳೂ ಕಮಿಷನರಿಗೇ ಎಂದೂ ಹೇಳುವುದು ಸರಿಯಲ್ಲ ಇದರ ಬಗ್ಗೆ ಈ ಸಭೆಯಲ್ಲಿ ಮೊದಲು ಮಸೂದೆ ಬಂದಾಗಲೂ ಚರ್ಚೆ ಮಾಡಿದ್ದಾರೆ. ಸೆಲೆಕ್ಟ್ ಕಮಿಟಿಯವರೂ ಸಹ ಇದನ್ನು ಪರಿಶೀಲನೆ ಮಾಡಿದ್ದಾರೆ. ಅಧ್ಯಕ್ಷರು ಎಂದರೆ "President in Council" ಎಂದು ಇದ್ದು ಆಡಳಿತದಲ್ಲಿ ಸೂಕ್ತವಾದ ಮಾರ್ಗದರ್ಶನ ಕೊಡುವ ಅಧಿಕಾರವಿದೆ. ಇದರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವ ಅಧಿಕಾರವೂ ಇದೆ. ಪೌರಸಭೆ

ಗಳಂತಹ ಸಂಸ್ಥೆಗೆ ಇದು ಅವಶ್ಯಕವೇ ಎಂದು ಕೇಳಬಹುದು. ಪೌರಸಭೆಗಳಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಲು ಮ್ಯಾನೇಜಿಂಗ್ ಕಮಿಟಿ ಇರುತ್ತದೆ. ಅದರಂತೆ ವರ್ಕ್ಸ ಕಮಿಟಿ, ಹೆಲ್ತ್ ಕಮಿಟಿ, ಹೀಗೆ ಪ್ರತಿಯೊಂದಕ್ಕೂ ಕಮಿಟಿಗಳಿವೆ, ಕಮಿಟಿಯ ಮೂಲಕವೇ ಎಲ್ಲ ಕೆಲಸಗಳೂ ನಡೆಯುತ್ತವೆ. ಕಾರ್ಯಾಂಗದ ಮೇಲೆ ಹತೋಟಿ ಇದ್ದೇ ಇರುತ್ತದೆ ಈ ದೃಷ್ಟಿಯಿಂದ ಪ್ರೆಸಿಡೆಂಟರು ಒಬ್ಬರೇ ಇದ್ದು ಎಲ್ಲ ಕಾರ್ಯವನ್ನೂ ಮಾಡುತ್ತಿಲ್ಲ ಎನ್ನುವುದು ಸಮಿತಿಯಲ್ಲಿಯೂ ಚರ್ಚೆಗೆ ಬಂದಿದ್ದಾಗ "President-in-Council" ಎಂದು ಪೌರಸಭೆಗಳಲ್ಲಿರುವುದು ಉತ್ತಮ ಎಂದು ಸ್ಪಷ್ಟವಾಗಿರಲು ಇದನ್ನು ಇಲ್ಲಿ ಅಡಕ ಮಾಡಿದೆ. ಇದರ ಜೊತೆಗೆ ಚೀಫ್ ಆಫೀಸರು ಮತ್ತು ಕಮಿಷನರುಗಳಿಗೆ ಕೆಲವು ಸ್ಟ್ಯಾಟ್ಯುಟರಿ ಫಂಕ್ಷನ್ನುಗಳನ್ನೂ ಕೊಡುವುದಗತ್ಯ ಎಂದು ಇದರಲ್ಲಿ ಸೇರಿಸಲಾಗಿದೆ. ಅನೇಕ ವೇಳೆ ಇಲ್ಲಿ ಚುನಾಯಿತರಾಗಿ ಬರತಕ್ಕ ಜನರು ಸರಿಯಾದ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ಮಾಡಬೇಕಾದರೆ ಅದಕ್ಕೆ ಅಡ್ಡಿ ಬರುವ ಸಂದರ್ಭ ಇರುತ್ತದೆ. ಆಳುವ ಪಕ್ಷ ಮಾಡುವ ಕೆಲಸಕ್ಕೆ ಅಡ್ಡಿ ಮಾಡಿದರೆ, ಅದರಿಂದ ವಿರೋಧಪಕ್ಷಕ್ಕೆ ನ್ಯಾಯ ದೊರಕುವುದಿಲ್ಲ. ಚೀಫ್ ಎಕ್ಸಿಕ್ಯೂಟೀವ್ ಆಫೀಸರಿಗೆ ಸ್ಟ್ಯಾಚುಟರಿರೈಟುಗಳಿರುವುದರಿಂದ ಸಾಮಾನ್ಯವಾಗಿ ಪೌರಸಭೆಯವರು ಇದನ್ನು ಪ್ರಶ್ನೆ ಮಾಡುವಂತಿಲ್ಲ. ಇದರಿಂದ ಯಾವ ವಿಧವಾದ ಎನ್‌ಕರೇಜ್‌ಮೆಂಟು ಮಾಡಿದಂತಾಗುವುದಿಲ್ಲ. ಕಂದಾಯ ವಸೂಲು ಮಾಡಿ ಎಂದು ಹೇಳಿರುವಾಗ ಜನರಿಂದ ಅದನ್ನು ಯಾವ ರೀತಿ ವಸೂಲು ಮಾಡಬೇಕೆನ್ನುವುದಕ್ಕೆ ಇದರಲ್ಲಿ ಸ್ಪಷ್ಟವಾದ ಸೆಕ್ಷನ್ನುಗಳಿರುವುದರಿಂದ ಇವು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತವೆ ಎಂದು ನಾನು ಭಾವನೆ ಮಾಡುತ್ತೇನೆ

ಇನ್ನು Multi-member Constituency ಮತ್ತು Single-member Constituencyಗಳ ಬಗ್ಗೆ ಹೇಳುವಾಗ ಕೆಲವರು ಏಕ ಸದಸ್ಯಕ್ಷೇತ್ರವಾಗಿದ್ದುದನ್ನು ಬಹು ಸದಸ್ಯಕ್ಷೇತ್ರವಾಗಿ ಏಕೆ ಮಾಡಿದಿರಿ ಎಂದು ಕಾರಣ ಕೇಳಿದರು. ಏಕ ಸದಸ್ಯಕ್ಷೇತ್ರ ಎಂದೇಕಿರಬಾರದು ಎಂದು ಪ್ರಶ್ನೆ ಮಾಡಿದ್ದಾರೆ. ನಮ್ಮ ಅನುಭವದಲ್ಲಿ ಹೇಳುವುದಾದರೆ ಮೊದಲು ಬಹು ಸದಸ್ಯಕ್ಷೇತ್ರಕ್ಕೆ ಬದಲಾಗಿ ಏಕಸದಸ್ಯಕ್ಷೇತ್ರವಾಗಿರಬೇಕೆಂದು ಕಾನೂನು ತಿದ್ದುಪಡಿ ಮಾಡಿ ಮೈಸೂರು ದೇಶದ ಎಲ್ಲ ಭಾಗಗಳಲ್ಲೂ ಮಾಡಲಾಗಿತ್ತು. ಇದರ ಅನುಭವದ ಪರಿಣಾಮದ ಮೇಲೆ ಇದು ಸೂಕ್ತವಾಗಿಲ್ಲ ಎಂದು ಪುನಃ ಇದನ್ನು ಬಹು ಸದಸ್ಯಕ್ಷೇತ್ರವಾಗೇ ಇರಬೇಕೆಂದು ಮತ್ತೆ ತಿದ್ದುಪಡಿ ಮಾಡಲಾಯಿತು. ನನ್ನ ಅನುಭವದಲ್ಲೂ ಬಹು ಸದಸ್ಯಕ್ಷೇತ್ರದಿಂದ ಅನುಕೂಲವಾಗುತ್ತದೆ ಎಂದು ಕಂಡುಬರುತ್ತದೆ. ಪೌರಸಭೆಯ ಮತದಾರರ ಕ್ಷೇತ್ರಗಳ ಸಂಖ್ಯೆಯಲ್ಲಿ ಕೇವಲ 250-300 ಜನರಿಗೆ ಒಬ್ಬ ಸದಸ್ಯರಿರುವುದಕ್ಕೆ ಬದಲಿಗೆ, 600, 700 ಸಾವಿರ ಜನರಿರುವವರ ಮೂಲಕ ಉಮೇದುವಾರರನ್ನು ಚುನಾಯಿಸಲು ಅನುಕೂಲ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಬಹು ಸದಸ್ಯಕ್ಷೇತ್ರವೇ ಸರಿಯಾದುದು ಎಂದು ಭಾವನೆ ಮಾಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಗಾಂಜೀ ವೀರಪ್ಪನವರು ಮಹಿಳೆಯರ ವಿಚಾರದಲ್ಲಿ ಈಚೆಗೆ ಮದರಾಸಿನಲ್ಲಿ ಒಂದು ತೀರ್ಮಾನವಾಗಿದೆ ಅದನ್ನು ವಿಚಾರ ಮಾಡಿ ಎಂದರು. ಇದರ ವಿಚಾರವೂ ಸೆಲೆಕ್ಟ್ ಕಮಿಟಿಯಲ್ಲಿ ಬಂತು. ಅಲ್ಲಿ ಬೇರೆ ಸಂದರ್ಭದಲ್ಲಿ ಬಂದಿತ್ತು. ಅಲ್ಲಿದ್ದಂತಹ ಸಂದರ್ಭಗಳು ಇಲ್ಲಿಲ್ಲ. ಈಗಿರುವಂತೆ ಇದ್ದರೆ ಈ ಕಾನೂನಿಗೆ ಯಾವ ಬಾಧಕವೂ ಇರುವುದಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀಮಾನ್ ದೇವೇಗೌಡರು Subject Lapse ಆದದ್ದನ್ನು ಮುಂದೆ ಯಾವ ರೀತಿ ತೆಗೆದುಕೊಳ್ಳಬೇಕೆಂದು ಹೇಳಿದರು. ಕೌನ್ಸಿಲ್ಲಿನಲ್ಲಿ ಬರುವ ಸಬ್‌ಜಕ್ಟುಗಳ ಮೇಲೆ ಆದ ತೀರ್ಮಾನ ಮೂರು ತಿಂಗಳಿನವರಿಗೆ ಜಾರಿಯಲ್ಲಿ ಇರುತ್ತದೆ. ಅಂತಹ ಸಬ್‌ಜಕ್ಟುಗಳನ್ನು ಪುನಃ ತರಲು ಅವಕಾಶವಿಲ್ಲ. ಅದನ್ನು ಪುನಃ ತರುವುದು ಬಹಳ ಅಗತ್ಯವಾಗಿದ್ದರೆ, ಯಾವ ಕಾರ್ಯಕ್ರಮವನ್ನನುಸರಿಸಿ ತರಬೇಕು ಎನ್ನುವುದನ್ನು ಅಲ್ಲಿ ಹೇಳಿದೆ. ಆದುದರಿಂದ ತೀರ್ಮಾನವಾಗದೆ ಲಾಗದೆ ಲ್ಯಾಪ್ಸ್ ಆದ ವಿಷಯಗಳನ್ನು ಪುನಃ ಯಾವ ಅಡ್ಡಿಯೂ ಇಲ್ಲ. ನನಗಾದರೂ ಅನಿಸುವುದೇನೆಂದರೆ ಅಂತಹುದಕ್ಕೆ ಅಡ್ಡಿ ಮಾಡುವುದೂ ಯೋಗ್ಯವಲ್ಲ. ಪುರಸಭೆಯು ಸೂಕ್ತವಾಗಿ ಪರಿಶೀಲನೆ ಮಾಡಿ ವಿಚಾರ ಮಾಡಿ ತೀರ್ಮಾನ ತೆಗೆದುಕೊಂಡಿರುವಂತಹದನ್ನು ಪುನಃ ತರುವುದಕ್ಕೆ ಅವಕಾಶವಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ಮತ್ತು ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಬಂದರೆ ಅಂತಹ ಸದಸ್ಯರನ್ನು ಹೊರಗೆ ಹಾಕಲು ಅಧಿಕಾರ ಇದೆ. ಅವರು ಇದನ್ನು ಪಾಲಿಸದೆ ಇದ್ದರೆ ಏನು ಮಾಡಬೇಕು ಎಂದು ಕೇಳಿದರೆ, ಹಾಗೆ,ಮಾಡುವುದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿಲ್ಲ ಎಂದು ಹೇಳುತ್ತೇನೆ. ಪ್ರಜಾಪ್ರಭುತ್ವ ನಡೆಯಬೇಕು ಎಂದು ನಾವೆಲ್ಲರೂ ಒಪ್ಪಿಕೊಂಡಿರುವುದರಿಂದ ಈ ನಡವಳಿಕೆಗಳು Traditions and Convetinosಗಳ ಮೇಲೆ ಹೋಗಬೇಕೇ ವಿನಾ ಅದಕ್ಕೆ ವಿರೋಧವಾಗಿ ಹೋಗುವುದು ಸರಿಯಲ್ಲ. ಇದು ಡೆಮಾಕ್ರಸಿಯಾಗುವುದಿಲ್ಲ ಮೊಬಾಕ್ರಸಿಯಾಗುತ್ತದೆ. ಅಧ್ಯಕ್ಷರಾದವರು ಸೂಚನೆ ಕೊಟ್ಟಾಗ ಬಹುಜನ ಅದರಂತೆ ನಡೆಯುತ್ತಾರೆಂದು ತಿಳಿದುಕೊಂಡಿದ್ದೇನೆ. ಎಲ್ಲೋ

(ಶ್ರೀ ಕೆ. ಪುಟ್ಟಸ್ವಾಮಿ)

ಒಟ್ಟಿಬ್ಬರು ತಕರಾರು ಮಾಡಿದರೆ ಅದಕ್ಕೆ ತಕ್ಕ ಶಿಕ್ಷೆ ಮಾಡಲು ಅಧಿಕಾರವಿದ್ದೇ ಇದೆ. ಸಭೆಯ ಶಿಸ್ತನ್ನು ಕಾಪಾಡುವುದು ಆವಶ್ಯಕ. ಅದಕ್ಕೆ ಕಾನೂನಿನಲ್ಲಿ ಅಧಿಕಾರವಿದೆ. ಇದಕ್ಕೆ ಸೂಕ್ತವಾದ ಬೆಂಬಲ ಕೊಡಲು ನಮ್ಮ Law and order set upನ್ನೂ ಕೂಡ ಇಂತಹ ಸಂದರ್ಭ ಬಂದ ಕಾಲಕ್ಕೆ ಉಪಯೋಗಮಾಡಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಚರ್ಚೆಗೆ ಇಷ್ಟು ಉತ್ತರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಮಂಡ್ಯದ ಶ್ರೀ ದೇವಯ್ಯನವರು ಒಂದು ವಿಚಾರವನ್ನು ಹೇಳಿದರು. ಅದು ಬಹಳ ಅಪೀಲಿಂಗ್ ಆಗಿದೆ. ನೇರವಾಗಿ ಚುನಾವಣೆಯಾಗಬೇಕೆಂದು ಅವರು ಹೇಳಿದರು. ಈ ವಿಚಾರವನ್ನು ಸದಸ್ಯರು ಪರಿಶೀಲನೆ ಮಾಡಿದ್ದಾರೆ. ಈ ಸಲಹೆ ಬಹು ಜನರ ಒಪ್ಪಿಗೆಗೆ ಮಾನ್ಯವಾಗಲಿಲ್ಲ. ನಮ್ಮ ಶ್ರೀಮಾನ್ ದೇವಯ್ಯನವರು ಹೇಳಿರುವ ವಿಚಾರ ಪರಿಶೀಲನೆಗೆ ಯೋಗ್ಯವಾದುದು. ಅವರೆ ನಮ್ಮ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಅದನ್ನು ಒಪ್ಪಲಿಲ್ಲ. ಆದ್ದರಿಂದ ಅದು ಸದ್ಯದಲ್ಲಿ ಸಾಧ್ಯವಾಗುವುದಿಲ್ಲ.

6-00 P.M.

Mr. SPEAKER.—The question is:

"That the Mysore Municipalities Bill, 1962, as reported by the Joint Select Committee, be taken into consideration"

The motion was adopted.

Mr. SPEAKER.—Now, we shall take up the clauses.

HON. MEMBERS.—We may take up the consideration of clauses to-morrow, Sir.

Mr. SPEAKER.—Then, the House stands adjourned and will reassemble to-morrow at 12-30 P.M.

The House adjourned at Five Minutes past Six of the Clock to meet again at Thirty Minutes past Twelve of the Clock on Wednesday, the 4th December 1963.

WD 1565—GPB—900—30-12-1963